6. ಕಾರ್ಡ್ ಪಡೆದವರು ಕಾರ್ಡ್ ಸ್ವೀಕರಿಸಿದ ತಕ್ಷಣವೇ ಮತ್ತು ಕಾಲಕಾಲಕ್ಕೆ ಪಿನ್ ಅನ್ನು ಬದಲಾಯಿಸಬೇಕು. ಕಾರ್ಡ್‌ನೊಂದಿಗೆ ಬಳಸಲು ಕಾರ್ಡ್‌ಧಾರಕರಿಗೆ ನೀಡಲಾದ ವೈಯಕ್ತಿಕ ಗುರುತಿನ ಸಂಖ್ಯೆ (ಪಿನ್) ಅಥವಾ ಕಾರ್ಡ್‌ಧಾರಕರು ಪಿನ್ ಆಗಿ ಆಯ್ಕೆ ಮಾಡಿದ ಯಾವುದೇ ಸಂಖ್ಯೆಗಳು ಅವರಿಗೆ ಮಾತ್ರ ತಿಳಿದಿದ್ದು, ಅವರ ವೈಯಕ್ತಿಕ ಬಳಕೆಗಾಗಿರುತ್ತದೆ ಮತ್ತು ಅದನ್ನು ವರ್ಗಾಯಿಸುವಂತಿಲ್ಲ ಹಾಗೂ ಇದು ಕಟ್ಟುನಿಟ್ಟಾಗಿ ಗೌಪ್ಯವಾಗಿರುತ್ತದೆ. ಪಿನ್‌ನ ಯಾವುದೇ ಲಿಖಿತ ದಾಖಲೆಯನ್ನು ಯಾವುದೇ ಸ್ವರೂಪದಲ್ಲಿ, ಸ್ಥಳದಲ್ಲಿ ಅಥವಾ ಯಾವುದೇ ರೀತಿಯಲ್ಲಿ ಮೂರನೇ ವ್ಯಕ್ತಿಯು ಬಳಸಿಕೊಳ್ಳಲು ಅನುಕೂಲವಾಗುವಂತೆ ಇಡಬಾರದು. ಪಿನ್ ಅನ್ನು ಯಾವುದೇ ಮೂರನೇ ವ್ಯಕ್ತಿಗೆ, ಬ್ಯಾಂಕಿನ ಸಿಬ್ಬಂದಿಗೆ ಅಥವಾ ವ್ಯಾಪಾರಿ ಪ್ರತಿಷ್ಠಾನಗಳಿಗೆ, ಯಾವುದೇ ಸಂದರ್ಭಗಳಲ್ಲಿ ಅಥವಾ ಯಾವುದೇ ರೀತಿಯಲ್ಲಿ ಸ್ವಯಂಪ್ರೇರಿತವಾಗಿಯೂ ಅಥವಾ ಅಲ್ಲದೆಯೂ ಬಹಿರಂಗಪಡಿಸಬಾರದು. ಪಿನ್ ಬಹಿರಂಗಪಡಿಸುವ ಕಾರಣದಿಂದಾಗಿ ಕಾರ್ಡ್‌ಧಾರಕರಿಗೆ ಉಂಟಾಗುವ ಯಾವುದೇ ನಷ್ಟ ಅಥವಾ ಹಾನಿಗಳಿಗೆ ಬ್ಯಾಂಕ್ ಜವಾಬ್ದಾರರಾಗಿರುವುದಿಲ್ಲ. ಪಿನ್ ಅನ್ನು ತಪ್ಪಾಗಿ ಅಥವಾ ಅನಧಿಕೃತವಾಗಿ ಬಳಸುವುದರಿಂದ ಬ್ಯಾಂಕಿಗೆ ಉಂಟಾಗುವ ಎಲ್ಲಾ ಪರೋಕ್ಷ ಅಥವಾ ನೇರ ಹಾನಿಗಳಿಗೆ ಕಾರ್ಡ್‌ಧಾರಕರು ಮತ್ತು ಖಾತೆದಾರರು ಹೊಣೆಗಾರರಾಗಿರುತ್ತಾರೆ. ಪಿನ್ ಅನ್ನು ಅದರ ಕಾರ್ಡ್‌ನೊಂದಿಗೆ ಮಾತ್ರ ಬಳಸಬಹುದು.
7. ಕಾರ್ಡನ್ನು ಬಳಸಿ ಮಾಡುವ ನಗದು ಹಿಂಪಡೆಯುವಿಕೆ, ವರ್ಗಾವಣೆ ಮತ್ತು ಇತರ ವಹಿವಾಟಿನ ಮೊತ್ತವನ್ನು ಕಾರ್ಡ್‌ಧಾರಕರ ಖಾತೆಯಿಂದ ತಕ್ಷಣವೇ ಮುರಿಯಲಾಗುವುದು. ಅಂತಹ ಯಾವುದೇ ವಹಿವಾಟುಗಳನ್ನು ಪೂರೈಸಲು ಕಾರ್ಡ್‌ಧಾರಕರು ಖಾತೆಯಲ್ಲಿ ಬೇಕಾಗುವಷ್ಟು ಹಣವನ್ನು ಹೊಂದಿರಬೇಕು.
8. ಕಾರ್ಡ್‌ಧಾರಕರು ಒಪ್ಪಿದ ಓವರ್‌ಡ್ರಾಫ್ಟ್ ಮಿತಿಯನ್ನು ಮೀರಿ ಕಾರ್ಡ್ ಅನ್ನು ಬಳಸಿ ಬ್ಯಾಂಕಿನಲ್ಲಿರುವ ತನ್ನ ಖಾತೆಯಿಂದ ಹಣವನ್ನು ಹಿಂಪಡೆಯಲು ಅರ್ಹರಾಗಿರುವುದಿಲ್ಲ.
9. ಕಾರ್ಡ್‌ನ ಬಳಕೆಯಿಂದ ಉಂಟಾಗುವ ವಹಿವಾಟುಗಳಿಗೆ ಅವು ಕಾರ್ಡ್‌ಧಾರಕರೇ ಸ್ವತಃ ಮಾಡಿರಲಿ ಅಥವಾ ಇಲ್ಲದಿರಲಿ ಕಾರ್ಡ್‌ಧಾರಕರು ಹೊಣೆಯಾಗಿರುತ್ತಾರೆ ಅಥವಾ ಕಾರ್ಡ್‌ಧಾರಕರು ಸಂಬಂಧಿತ ಪಿನ್‌ನ ಅನಧಿಕೃತ ಬಳಕೆಯಿಂದ ಉಂಟಾಗುವ, ಆರ್‌ಬಿಐನ ಅಥವಾ ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ 1999ರ ಅಡಿಯಲ್ಲಿ ರೂಪಿಸಲಾದ ನಿಯಮ ಅಥವಾ ಭಾರತದಲ್ಲಿ ಮತ್ತು/ಅಥವಾ ಯಾವುದೇ ದೇಶ/ರಾಜ್ಯ/ಖಂಡ/ಭೂಪ್ರದೇಶದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಲ್ಲಂಘನೆಯ ಕಾರಣದಿಂದಾಗಿ ಉದ್ಭವಿಸುವ ಕಾನೂನು ಕ್ರಮವನ್ನು ಒಳಗೊಂಡಂತೆ, ಈ ಒಪ್ಪಂದದ ಮುಕ್ತಾಯದ ಸಮಯ ಯಾವಾಗಲೇ ಆಗಿದ್ದರೂ, ಯಾವುದೇ ನಷ್ಟ ಅಥವಾ ಹಾನಿಯ ವಿರುದ್ಧ ಬ್ಯಾಂಕ್ ಅನ್ನು ರಕ್ಷಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಎಲೆಕ್ಟ್ರಾನಿಕ್/ ಇಂಟರ್ನೆಟ್ ಟ್ರೇಡಿಂಗ್ ಪೋರ್ಟಲ್‌ಗಳ ಮೂಲಕ ಸಾಗರೋತ್ತರ ವಿದೇಶೀ ವಿನಿಮಯ ವ್ಯಾಪಾರಕ್ಕೆ ಸಹ ಡೆಬಿಟ್ ಕಾರ್ಡ್ ಅನ್ನು ನಿಷೇಧಿಸಲಾಗಿದೆ.
10. ಖಾತೆಯಿಂದ ಮಿತಿಗಿಂತ ಹೆಚ್ಚು ಹಣವನ್ನು ಹಿಂಪಡೆದಿದ್ದರೆ ಅಥವಾ ಖಾತೆಯು ಡೆಬಿಟ್ ಮೊತ್ತ ತೋರಿಸಿದಲ್ಲಿ ಬ್ಯಾಂಕ್ ತನ್ನ ನಿಯಮಗಳ ಪ್ರಕಾರ ಬಡ್ಡಿ ವಿಧಿಸುವ ಹಕ್ಕನ್ನು ಹೊಂದಿದೆ ಮತ್ತು ಆತನ ಯಾವುದೇ ಖಾತೆಗಳಲ್ಲಿ ನಗದು ಮೊತ್ತವಿದ್ದರೆ ಯಾವುದೇ ಮುನ್ಸೂಚನೆಯಿಲ್ಲದೆ ಅದನ್ನು ಮುರಿದು ಸರಿಹೊಂದಿಸುವ ಹಕ್ಕನ್ನು ಹೊಂದಿರುತ್ತದೆ ಎಂದು ಈ ಮೂಲಕ ಕಾರ್ಡ್‌ಧಾರಕರು ಒಪ್ಪುತ್ತಾರೆ.
11. ಕಾರ್ಡ್‌ನಲ್ಲಿ ಸೂಚಿಸಲಾದ ತಿಂಗಳು/ವರ್ಷದ ಕೊನೆಯ ದಿನಾಂಕದವರೆಗೆ ಕಾರ್ಡ್ ಮಾನ್ಯವಾಗಿರುತ್ತದೆ. ಅವಧಿ ಮುಗಿದಾಗ ಕಾರ್ಡ್‌ಧಾರಕರು ಕಾರ್ಡ್ ಅನ್ನು ಹೋಳುಗಳಾಗಿ ಕತ್ತರಿಸಿ ಅದನ್ನು ನಾಶಮಾಡಲು ಈ ಮೂಲಕ ಬದ್ಧನಾಗಿರುತ್ತಾನೆ. ಕಾರ್ಡ್‌ನ ಅವಧಿ ಮುಗಿಯುವ ಮೊದಲು ಖಾತೆಯ ನಡವಳಿಕೆಯ ಮೌಲ್ಯಮಾಪನದ ನಂತರ ನವೀಕರಿಸಿದ ಕಾರ್ಡ್ ಅನ್ನು ಕಾರ್ಡ್‌ಧಾರಕರಿಗೆ ಬ್ಯಾಂಕ್‌ನ ವಿವೇಚನಾನುಸಾರವಾಗಿ ಕಳುಹಿಸಲಾಗುತ್ತದೆ. ಅವಧಿ ಮುಗಿದ ನಂತರ ಕಾರ್ಡ್ ಅನ್ನು ನವೀಕರಿಸುವ ಮತ್ತು ಯಾವುದೇ ನವೀಕರಣ ಶುಲ್ಕಗಳು/ವಾರ್ಷಿಕ ನಿರ್ವಹಣಾ ಶುಲ್ಕಗಳನ್ನು ನಿಮ್ಮ ಖಾತೆಯಿಂದ ಮುರಿಯುವ ಅಧಿಕಾರ ಬ್ಯಾಂಕಿಗೆ ಇರುತ್ತದೆ. ನವೀಕೃತ ಕಾರ್ಡ್ ಕಾಲಕಾಲಕ್ಕೆ ತಿದ್ದುಪಡಿ ಮಾಡಲಾಗುವ ಡೆಬಿಟ್ ಕಾರ್ಡ್‌ನ ನಿಯಮ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. ಇದಕ್ಕೆ ಯಾವುದೇ ಹೆಚ್ಚಿನ ಅರ್ಜಿ ಅಥವಾ ಒಪ್ಪಂದವು ಅಗತ್ಯವಾಗಿರುವುದಿಲ್ಲ.

12. ಎಟಿಎಂನಲ್ಲಿ ನಗದು ಹಿಂತೆಗೆದುಕೊಳ್ಳುವ ಸೌಲಭ್ಯವನ್ನು ನಿಷ್ಕ್ರಿಯಗೊಳಿಸಲಾಗಿದೆ. ಆದ್ದರಿಂದ, ಕಾರ್ಡ್‌ಧಾರಕರು ವಿತರಣೆಯಾದ ಹಣವನ್ನು ಸಂಗ್ರಹಿಸಬೇಕು.
13. ಕಾರ್ಡ್‌ಧಾರಕರು ತಮ್ಮ ಪಾಸ್‌ಪುಸ್ತಕವನ್ನು ತಿಂಗಳಿಗೊಮ್ಮೆ ಅಪ್‌ಡೇಟ್ ಮಾಡಿಕೊಳ್ಳಬೇಕು. ಎಟಿಎಂ/ವ್ಯಾಪಾರಿ ಪ್ರತಿಷ್ಠಾನದಲ್ಲಿ ನಡೆಸಿದ ವಹಿವಾಟು ವಿವರಗಳಲ್ಲಿ ಇರುವ ಯಾವುದೇ ಅಸಂಗತ ವಿಚಾರಗಳು ಅಥವಾ ವ್ಯತ್ಯಾಸಗಳ ಬಗ್ಗೆ ಕಾರ್ಡ್‌ಧಾರಕರು ವರದಿಯ ದಿನಾಂಕದಿಂದ ಅಥವಾ ತನ್ನ ಪಾಸ್‌ಪುಸ್ತಕದ ಪೂರ್ಣಗೊಂಡ ದಿನಾಂಕದಿಂದ ಏಳು (7) ದಿನಗಳಲ್ಲಿ ಬ್ಯಾಂಕ್‌ಗೆ ಲಿಖಿತವಾಗಿ ತಿಳಿಸಬೇಕು. ಈ ಸಮಯದೊಳಗೆ ಅಂತಹ ಯಾವುದೇ ಸೂಚನೆ ಬರದಿದ್ದರೆ, ವ್ಯವಹಾರ ಮತ್ತು ಖಾತೆ/ಪಾಸ್‌ಬುಕ್‌ನ ವರದಿ ಎರಡೂ ನಿಖರವಾಗಿದೆ ಎಂದು ಬ್ಯಾಂಕ್ ಊಹಿಸುತ್ತದೆ.

## ವ್ಯಾಪಾರಿ ಪ್ರತಿಷ್ಠಾನದ ಬಳಕೆ:

1. ವೀಸಾ/ರುಪೇ ಲೋಗೊವನ್ನು ಪ್ರದರ್ಶಿಸುವ ಭಾರತ ಮತ್ತು ವಿದೇಶಗಳಲ್ಲಿನ ವ್ಯಾಪಾರಿ ಪ್ರತಿಷ್ಠಾನಗಳಲ್ಲಿನ ಎಲ್ಲಾ ಎಲೆಕ್ಟ್ರಾನಿಕ್ ಪಾಯಿಂಟ್ ಆಫ್ ಸೇಲ್ ಯಂತ್ರಗಳಲ್ಲಿ ಕಾರ್ಡ್ ಅನ್ನು ಸ್ವೀಕರಿಸಲಾಗುತ್ತದೆ.
2. ಕಾರ್ಡ್ ಎಲೆಕ್ಟ್ರಾನಿಕ್ ಬಳಕೆಗೆ ಮಾತ್ರ ಮತ್ತು ಎಲೆಕ್ಟ್ರಾನಿಕ್ ಪಾಯಿಂಟ್ ಆಫ್ ಸೇಲ್ ಸ್ವೈಪ್ ಯಂತ್ರ ಹೊಂದಿರುವ ವ್ಯಾಪಾರಿ ಪ್ರತಿಷ್ಠಾನಗಳಲ್ಲಿ ಮಾತ್ರ ಸ್ವೀಕರಿಸಲಾಗುತ್ತದೆ. ಎಲೆಕ್ಟ್ರಾನಿಕ್ ಬಳಕೆಯನ್ನು ಹೊರತುಪಡಿಸಿದ ಕಾರ್ಡ್‌ನ ಯಾವುದೇ ಬಳಕೆಯನ್ನು ಅನಧಿಕೃತವೆಂದು ಪರಿಗಣಿಸಲಾಗುತ್ತದೆ ಮತ್ತು ಅಂತಹ ವ್ಯವಹಾರಗಳಿಗೆ ಕಾರ್ಡ್‌ಧಾರಕರು ಏಕಮಾತ್ರ ಜವಾಬ್ದಾರರಾಗಿರುತ್ತಾರೆ. ವ್ಯಾಪಾರಿ ಪ್ರತಿಷ್ಠಾನಗಳಲ್ಲಿನ ಎಲೆಕ್ಟ್ರಾನಿಕ್ ಪಾಯಿಂಟ್ ಆಫ್ ಸೇಲ್ ಸ್ವೈಪ್ ಯಂತ್ರಗಳಲ್ಲಿ ಕಾರ್ಡ್ ಬಳಕೆಗಾಗಿ ಎಟಿಎಂ ಪಿನ್ ಅಗತ್ಯವಿದೆ ಎಂಬುದನ್ನು ದಯವಿಟ್ಟು ಗಮನಿಸಿ. ಅಂತಹ ವಹಿವಾಟುಗಳನ್ನು ದೃಢೀಕರಿಸಲು ನಿಮ್ಮ ಎಟಿಎಂ ಪಿನ್ ಅನ್ನು ನೀವು ಬಳಸಬೇಕಾಗುತ್ತದೆ. ದಯವಿಟ್ಟು ನೀವು ಕೀಪ್ಯಾಡ್‌ನಲ್ಲಿ ಪಿನ್ ಅನ್ನು ಸ್ವತಃ ನಮೂದಿಸಿ ಮತ್ತು ಅದನ್ನು ಯಾರಿಗೂ ಯಾವ ಕಾರಣಕ್ಕೂ ಬಹಿರಂಗಪಡಿಸಬೇಡಿ.
3. ಕಾರ್ಡ್‌ಧಾರಕರು ವ್ಯಾಪಾರಿ ಪ್ರತಿಷ್ಠಾನಗಳಲ್ಲಿ ಕಾರ್ಡ್ ಬಳಸಿದಾಗಲೆಲ್ಲಾ ರಶೀದಿಗೆ ಸಹಿ ಹಾಕಬೇಕು ಮತ್ತು ಅದರ ನಕಲನ್ನು ಉಳಿಸಿಕೊಳ್ಳಬೇಕು. ಆ ರಶೀದಿಯ ಪ್ರತಿಗಳನ್ನು ಬ್ಯಾಂಕ್ ನೀಡುವುದಿಲ್ಲ. ಕಾರ್ಡ್‌ಧಾರಕರು ರಶೀದಿಗೆ ಸಹಿ ಮಾಡಿಲ್ಲದಿದ್ದರೂ ಅವರಿಂದಲೇ ಅಧಿಕೃತವಾಗಿ ನಡೆಯುವ ವ್ಯವಹಾರವಾದ್ದರಿಂದ ಅವರೇ ಹೊಣೆಗಾರರು ಎಂದು ಪರಿಗಣಿಸಲಾಗುತ್ತದೆ.
4. ಸರಕು ಮತ್ತು ಸೇವೆಗಳ ಪೂರೈಕೆಯನ್ನು ಒಳಗೊಂಡಿದ್ದರೂ ಅದಕ್ಕೆ ಮಾತ್ರ ಸೀಮಿತವಾಗಿರದೆ, ಕಾರ್ಡ್‌ಧಾರಕರೊಂದಿಗೆ ವ್ಯಾಪಾರಿ ಹೊಂದಿರಬಹುದಾದ ಯಾವುದೇ ವ್ಯವಹಾರಗಳಿಗೆ ಬ್ಯಾಂಕ್ ಯಾವುದೇ ಜವಾಬ್ದಾರಿಯನ್ನು ಸ್ವೀಕರಿಸುವುದಿಲ್ಲ. ಯಾವುದೇ ವೀಸಾ/ರುಪೇ ಕಾರ್ಡ್ ವ್ಯಾಪಾರಿ ಸಂಸ್ಥೆಗಳಿಗೆ ಸಂಬಂಧಿಸಿದ ಯಾವುದೇ ದೂರನ್ನು ಹೊಂದಿದ್ದರೆ, ಕಾರ್ಡ್‌ಧಾರಕರು ಈ ವಿಷಯವನ್ನು ವ್ಯಾಪಾರಿ ಪ್ರತಿಷ್ಠಾನದೊಂದಿಗೆ ಸ್ವತಃ ಪರಿಹರಿಸಿಕೊಳ್ಳಬೇಕು ಮತ್ತು ದೂರು ಬಗೆಹರಿಯದೆ ಉಳಿದಿದ್ದರೆ ಅದು ಕಾರ್ಡ್‌ಧಾರಕರನ್ನು ಬ್ಯಾಂಕಿನ ಯಾವುದೇ ಬಾಧ್ಯತೆಗಳಿಂದ ಮುಕ್ತಗೊಳಿಸುವುದಿಲ್ಲ.
5. ಯಾವುದೇ ವ್ಯಾಪಾರಿ ಪ್ರತಿಷ್ಠಾನದಿಂದ ನಿಮ್ಮ ವಹಿವಾಟಿನ ಮೌಲ್ಯ/ವೆಚ್ಚದ ಮೇಲೆ ವಿಧಿಸಲಾಗುವ ಯಾವುದೇ ಶುಲ್ಕಗಳಿಗೆ ಮತ್ತು ಖಾತೆಯಿಂದ ವ್ಯವಹಾರದ ಮೊತ್ತದೊಂದಿಗೆ ಡೆಬಿಟ್ ಆಗುವ ಶುಲ್ಕಕ್ಕೆ ಬ್ಯಾಂಕ್ ಜವಾಬ್ದಾರಿಯಾಗಿರುವುದಿಲ್ಲ.
6. ಖರೀದಿ ಮತ್ತು ಸರಕು/ಸೇವೆಗಳನ್ನು ರದ್ದುಗೊಳಿಸಿದ ನಂತರದ ಮರುಜಮಾ ಎರಡು ಪ್ರತ್ಯೇಕ ಮತ್ತು ಸ್ವತಂತ್ರ ವಹಿವಾಟುಗಳಾಗಿವೆ. ಹಣದ ಮರುಪಾವತಿಯನ್ನು (ರದ್ದತಿ ಶುಲ್ಕವನ್ನು ಕಳೆದು ಉಳಿದ ಮೊತ್ತ) ಕಾರ್ಡ್‌ಧಾರಕರ ಖಾತೆಗೆ ವ್ಯಾಪಾರಿಯಿಂದ ಸ್ವೀಕರಿಸಿದ ಬಳಿಕವಷ್ಟೇ ನೀಡಲಾಗುತ್ತದೆ. 30 ದಿನಗಳಲ್ಲಿ ಮರುಪಾವತಿಯನ್ನು ಕಾರ್ಡ್‌ಧಾರಕರ ಖಾತೆಗೆ ನೀಡದಿದ್ದರೆ, ಕಾರ್ಡ್‌ಧಾರಕರು ವ್ಯಾಪಾರಿಯಿಂದ ಪಡೆದ ಕ್ರೆಡಿಟ್ ನೋಟ್‌ನ ನಕಲಿನ ಜೊತೆಗೆ ಬ್ಯಾಂಕಿಗೆ ತಿಳಿಸಬೇಕು.
7. ಬಹು ಖಾತೆಗಳಿಗೆ ಲಿಂಕ್ ಮಾಡಲಾದ ಕಾರ್ಡ್‌ಗಳ ಸಂದರ್ಭದಲ್ಲಿ, ವ್ಯಾಪಾರಿ ಪ್ರತಿಷ್ಠಾನದಲ್ಲಿನ ವ್ಯವಹಾರಗಳು ಪ್ರಾಥಮಿಕ ಖಾತೆಯ ಮೇಲೆ ಮಾತ್ರ ಪರಿಣಾಮ ಬೀರುತ್ತವೆ. ಒಂದು ವೇಳೆ ಪ್ರಾಥಮಿಕ ಖಾತೆಯಲ್ಲಿ ಸಾಕಷ್ಟು ಹಣವಿಲ್ಲದಿದ್ದರೆ, ಕಾರ್ಡ್‌ಗೆ ಲಿಂಕ್ ಮಾಡಲಾದ ಇತರ ಖಾತೆಯಲ್ಲಿ ಜೊತೆಯಾಗಿ ಅಥವಾ ಯಾವುದಾದರೂ ಒಂದರಲ್ಲಿ ಅಗತ್ಯವಿದ್ದಷ್ಟು ಮೊತ್ತ ಲಭ್ಯವಿದ್ದರೂ ಸಹ ಬ್ಯಾಂಕ್ ವ್ಯವಹಾರವನ್ನು ಗೌರವಿಸುವುದಿಲ್ಲ.
8. ಕಾರ್ಡ್ ಅನ್ನು ಹೋಟೆಲ್‌ಗಳಲ್ಲಿ ಚೆಕ್ ಇನ್ ಸಮಯದಲ್ಲಿ ಬಳಸಬಾರದು ಮತ್ತು ಖರೀದಿ ವಹಿವಾಟು ಅಥವಾ ಸೇವೆಯನ್ನು ಪೂರ್ಣಗೊಳಿಸುವ ಮೊದಲೇ ಪಾವತಿಸುವ ವ್ಯವಸ್ಥೆ ಇರುವ ಸ್ಥಳಗಳಲ್ಲಿಯೂ ಸಹ ಬಳಸಬಾರದು.
9. ಯಾವುದೇ ಮೇಲ್ ಆರ್ಡರ್/ಫೋನ್ ಖರೀದಿಗೆ ಕಾರ್ಡ್ ಅನ್ನು ಬಳಸಬಾರದು ಮತ್ತು ಅಂತಹ ಯಾವುದೇ ಬಳಕೆಯನ್ನು ಅನಧಿಕೃತವೆಂದು ಪರಿಗಣಿಸಲಾಗುತ್ತದೆ
10. ವಿದೇಶಿ ಪತ್ರಿಕೆಗಳು/ನಿಯತಕಾಲಿಕಗಳಿಗೆ ಚಂದಾದಾರಿಕೆಯನ್ನು ಪಾವತಿಸಲು ಕಾರ್ಡ್ ಅನ್ನು ಬಳಸಬಾರದು ಮತ್ತು ಅಂತಹ ಯಾವುದೇ ಬಳಕೆಯನ್ನು ಅನಧಿಕೃತವೆಂದು ಪರಿಗಣಿಸಲಾಗುತ್ತದೆ.
11. ಎಲ್ಲಾ ಅನಧಿಕೃತ ಕೃತ್ಯ ಮತ್ತು ವಹಿವಾಟುಗಳಿಗೆ ಕಾರ್ಡ್‌ಧಾರಕರು ಸ್ವಯಂ ಜವಾಬ್ದಾರರಾಗಿರುತ್ತಾರೆ

## ಅಂತರರಾಷ್ಟ್ರೀಯ ಬಳಕೆ:

1. ವಿನಿಮಯ ನಿಯಂತ್ರಣ ಅಧಿನಿಯಮಗಳು, ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) 1999 ಮತ್ತು ಅದರ ಎಲ್ಲಾ ತಿದ್ದುಪಡಿಗಳು ಮತ್ತು ಎಲ್ಲಾ ನಿಯಮ ಮತ್ತು ನಿಬಂಧನೆಗಳು, ಕಾಲಕಾಲಕ್ಕೆ ಆರ್‌ಬಿಐ ನಿಗದಿಪಡಿಸಿದ ವಿದೇಶಿ ವಿನಿಮಯ ಅರ್ಹತೆಗಳಿಗೆ ಸಂಬಂಧಿಸಿದಂತೆ ಹೊರಡಿಸಲಾದ ಅಧಿಸೂಚನೆಗಳಿಗೆ ಕಾರ್ಡ್‌ಧಾರಕರು ಬದ್ಧರಾಗಿರಬೇಕು. ಅವರು ಅದಕ್ಕೆ ಬದ್ಧರಾಗಿರದಿದ್ದಲ್ಲಿ, ವಿದೇಶಿ ವಿನಿಮಯಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಜಾರಿಯಲ್ಲಿರುವ ಫೆಮಾ ಮತ್ತು ಇತರ ಯಾವುದೇ ಕಾನೂನಿನಡಿಯಲ್ಲಿನ ಕ್ರಮಕ್ಕೆ ಕಾರ್ಡ್‌ಧಾರಕರು ಹೊಣೆಗಾರರಾಗಿರುತ್ತಾರೆ. ಮಾತ್ರವಲ್ಲ, ಕಾರ್ಡ್‌ಧಾರಕರ ಬ್ಯಾಂಕ್ ಅಥವಾ ಆರ್‌ಬಿಐ ಸ್ವತಃ ಕಾರ್ಡ್‌ಧಾರಕರಿಂದ ಅಂತಾರಾಷ್ಟ್ರೀಯವಾಗಿ ಮಾನ್ಯತೆ ಪಡೆದ ಡೆಬಿಟ್ ಕಾರ್ಡನ್ನು ರದ್ದುಗೊಳಿಸಬಹುದು.
2. ನೇಪಾಳ ಮತ್ತು ಭೂತಾನ್‌ನಲ್ಲಿ ವಿದೇಶಿ ಕರೆನ್ಸಿ ವ್ಯವಹಾರಗಳಿಗೆ ಡೆಬಿಟ್ ಕಾರ್ಡ್ ಮಾನ್ಯತೆ ಪಡೆದಿಲ್ಲ [ಅಂದರೆ. ಸ್ಥಳೀಯವಲ್ಲದ ಯಾವುದೇ ಕರೆನ್ಸಿ ಅಥವಾ ಭಾರತೀಯ ರೂಪಾಯಿ ಅಲ್ಲದ ಯಾವುದೇ ಕರೆನ್ಸಿಯಲ್ಲಿ.]
3. ನಾನ್–ರೆಸಿಡೆಂಟ್ ಎಕ್ಸ್‌ಟರ್ನಲ್ (ಎನ್‌ಆರ್‌ಐ) ಖಾತೆ ಹೊಂದಿರುವ ಅನಿವಾಸಿ ಭಾರತೀಯರು ಕೂಡಾ ಭಾರತ/ಸಾಗರೋತ್ತರ ನಾಡಿನಲ್ಲಿ ಬಳಸುವಂತೆ ಕಾರ್ಡನ್ನು ಹೊಂದಬಹುದು.
4. ಆರ್‌ಬಿಐ ಕಾಲಕಾಲಕ್ಕೆ ನಿಗದಿಪಡಿಸಿ ಸೂಚಿಸಿದಂತೆ ವಿದೇಶಿ ವಿನಿಮಯ ಅರ್ಹತೆಯನ್ನು ಕಾರ್ಡ್‌ಧಾರಕರು ಮೀರಿದಾಗ ನೇರ ಅಥವಾ ಪರೋಕ್ಷವಾಗಿ ಉಂಟಾಗುವ ಯಾವುದೇ ನಷ್ಟ ಅಥವಾ ಹಾನಿಗೆ ಸಂಬಂಧಿಸಿದಂತೆ ಬ್ಯಾಂಕ್ ಯಾವುದೇ ಹೊಣೆಗಾರಿಕೆಯನ್ನು ಹೊಂದಿರುವುದಿಲ್ಲ.
5. ಅಕ್ರಮ ಉದ್ದೇಶಕ್ಕಾಗಿ ಪಾವತಿಗಳನ್ನು ಮಾಡಲು ಕಾರ್ಡ್ ಅನ್ನು ಬಳಸದಿರಲು ಕಾರ್ಡ್‌ಧಾರಕರು ಬದ್ಧರಾಗಿರುತ್ತಾರೆ, ಇದಕ್ಕಾಗಿ ವಿದೇಶಿ ವಿನಿಮಯವನ್ನು ಅಸ್ತಿತ್ವದಲ್ಲಿರುವ ನಿಯಮಗಳ ಅಡಿಯಲ್ಲಿ ಅನುಮತಿಸಲಾಗುವುದಿಲ್ಲ.
6. ಕಾರ್ಡ್ ನೀಡಲಾದ ತನ್ನ ಖಾತೆಯಲ್ಲಿ ಸಾಕಷ್ಟು ಸಮಾನ ಭಾರತೀಯ ರೂಪಾಯಿ ಜಮೆಗೊಳಿಸಿದ್ದರೆ ಮಾತ್ರ ವಿದೇಶಿ ಕರೆನ್ಸಿಯಲ್ಲಿ ಮೊತ್ತವನ್ನು ಹಿಂಪಡೆಯಲು ಅನುಮತಿ ಇದೆ ಎಂದು ಕಾರ್ಡ್‌ಧಾರಕರು ಅರ್ಥಮಾಡಿಕೊಂಡಿದ್ದಾರೆ ಮತ್ತು ಸಾಕಷ್ಟು ಮೊತ್ತ ಇಲ್ಲದ ಸಂದರ್ಭದಲ್ಲಿ ಹಿಂಪಡೆಯುವಿಕೆಯನ್ನು ನಿರಾಕರಿಸಲಾಗುತ್ತದೆ
7. ಖಾತೆಯಿಂದ ವಿದೇಶಿ ಕರೆನ್ಸಿಯನ್ನು ಹಿಂಪಡೆದುಕೊಳ್ಳುವ ಪ್ರತಿಯೊಂದು ವಹಿವಾಟು ಬ್ಯಾಂಕ್ ನಿಗದಿಪಡಿಸಿದ ಸೇವಾ ಶುಲ್ಕವನ್ನು ಆಕರ್ಷಿಸುತ್ತದೆ ಎಂದು ಕಾರ್ಡ್‌ಧಾರಕರು ಒಪ್ಪುತ್ತಾರೆ. ಸೇವಾ ಶುಲ್ಕವು ಮುನ್ಸೂಚನೆಯಿಲ್ಲದೆ ಬದಲಾಗಬಹುದಾಗಿರುತ್ತದೆ.
8. ಎಲ್ಲಾ ವಿದೇಶಿ ಕರೆನ್ಸಿ ವಹಿವಾಟುಗಳಿಗೆ ಬಳಸುವ ವಿನಿಮಯ ದರವನ್ನು ಬ್ಯಾಂಕ್ ನಿರ್ಧರಿಸುತ್ತದೆ ಮತ್ತು ಕಾರ್ಡ್‌ಧಾರಕರು ಇದಕ್ಕೆ ಬದ್ಧರಾಗಿರುತ್ತಾರೆ.

## ಎಟಿಎಂ ಬಳಕೆ:

1. ಕಾರ್ಡ್ ಅನ್ನು ಬ್ಯಾಂಕಿನ ಎಟಿಎಂಗಳಲ್ಲಿ ಮತ್ತು ವಿಶ್ವಾದ್ಯಂತ ವೀಸಾ/ರುಪೇ ಸೌಲಭ್ಯವಿರುವ ಎಟಿಎಂಗಳಲ್ಲಿ ಸ್ವೀಕರಿಸಲಾಗುತ್ತದೆ.
2. ಸಹಭಾಗಿತ್ವದ ನೆಟ್‌ವರ್ಕ್ ಎಟಿಎಂಗಳಲ್ಲಿ ನಗದು ಹಿಂಪಡೆಯುವಿಕೆ ಮತ್ತು ಉಳಿಕೆ ಮೊತ್ತದ ಪರಿಶೀಲನೆ ಸೇರಿದಂತೆ ಎಲ್ಲಾ ವಹಿವಾಟುಗಳು ಶುಲ್ಕಕ್ಕೆ ಒಳಪಟ್ಟಿರುತ್ತವೆ ಮತ್ತು ಆ ಶುಲ್ಕಗಳು ಅಂತಹ ವಹಿವಾಟಿನ ಸಮಯದಲ್ಲಿಯೇ ಖಾತೆಗೆ ಅನ್ವಯವಾಗುತ್ತವೆ. ಅದೇ ರೀತಿ ಬ್ಯಾಂಕ್ ಅಥವಾ ಬ್ಯಾಂಕೇತರ ಎಟಿಎಂಗಳಲ್ಲಿನ ಎಲ್ಲಾ ವಹಿವಾಟುಗಳು ಸಫಲಗೊಂಡರೂ ಅಥವಾ ವಿಫಲವಾದರೂ ಕಾಲಕಾಲಕ್ಕೆ ಬ್ಯಾಂಕ್ ನಿರ್ಧರಿಸಿದಂತೆ ಶುಲ್ಕಗಳಿಗೆ ಒಳಪಟ್ಟಿರುತ್ತವೆ. ನವೀಕೃತ ಶುಲ್ಕದ ಪಟ್ಟಿಯನ್ನು ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಕಾಣಬಹುದು.
3. ಕಾರ್ಡ್‌ಧಾರಕರು ಬ್ಯಾಂಕಿನ ವಹಿವಾಟಿನ ದಾಖಲೆಯನ್ನು ಅಂತಿಮ ಮತ್ತು ಎಲ್ಲಾ ಉದ್ದೇಶಗಳಿಗಾಗಿ ಬಾಧ್ಯಕಾರಿಯಾಗಿರುತ್ತದೆ ಎಂದು ಒಪ್ಪಬೇಕು. ಪ್ರತಿಬಾರಿ ವಹಿವಾಟು ಪೂರ್ಣಗೊಂಡ ನಂತರ, ಕಾರ್ಡ್‌ಧಾರಕರ ಸೂಚನೆಗಳ ದಾಖಲೆಗಳಾಗಿ ಎಟಿಎಂನಲ್ಲಿ ಮೂಡಿಬರುವ ಮುದ್ರಿತ ರಶೀದಿಗಳನ್ನು, ಆ ಉದ್ದೇಶಕ್ಕಾಗಿ ಬ್ಯಾಂಕಿನ ದಾಖಲೆಗಳಾಗಿ ಪರಿಗಣಿಸಲಾಗುವುದಿಲ್ಲ.
4. ಎಟಿಎಂ ಅಥವಾ ಕಾರ್ಡಿನ ಅಸಮರ್ಪಕತೆಯಿಂದಾಗಿ ಅಥವಾ ನಿಯಂತ್ರಣಕ್ಕೆ ಮೀರಿದ ಸನ್ನಿವೇಶಗಳಿಂದಾಗಿ (ನೇರವಾಗಿ ಅಥವಾ ಪರೋಕ್ಷವಾಗಿ) ಯಾವುದೇ ವೈಫಲ್ಯ ಉಂಟಾದರೆ, ಸೇವೆಯನ್ನು ಒದಗಿಸಲು ಅಥವಾ ಈ ಕಾರ್ಡ್ ಅಡಿಯಲ್ಲಿ ಯಾವುದೇ ಜವಾಬ್ದಾರಿಯನ್ನು ನಿರ್ವಹಿಸಲು ಬ್ಯಾಂಕ್ ಜವಾಬ್ದಾರನಾಗಿರುವುದಿಲ್ಲ.
5. ಕಾರ್ಡ್ ಕಳೆದುಹೋದರೆ ಅಥವಾ ಕಾರ್ಡ್ ಮತ್ತು ಸಂಬಂಧಿತ ಪಿನ್ ಬಳಕೆಯಿಂದ ಉಂಟಾಗುವ ಯಾವುದೇ ಪರಿಣಾಮಕಾರಿ ಅಥವಾ ಪರೋಕ್ಷ ನಷ್ಟ ಅಥವಾ ಹಾನಿಗಳಿಗೆ ಬ್ಯಾಂಕ್ ಜವಾಬ್ದಾರನಾಗಿರುವುದಿಲ್ಲ.
6. ಭಾರತವನ್ನು ಹೊರತುಪಡಿಸಿ ಬೇರೆ ದೇಶದಲ್ಲಿನ ಎಟಿಎಂ ಸೇವೆಗಳ ಲಭ್ಯತೆಯು ಆ ದೇಶದಲ್ಲಿ ಜಾರಿಯಲ್ಲಿರುವ ಸ್ಥಳೀಯ ನಿಯಮಗಳಿಂದ ನಿಯಂತ್ರಿಸಲ್ಪಡುತ್ತದೆ. ಈ ಸೇವೆಗಳನ್ನು ಯಾವುದೇ ಸೂಚನೆ ಇಲ್ಲದೆ ಹಿಂತೆಗೆದುಕೊಂಡರೆ ಬ್ಯಾಂಕ್ ಜವಾಬ್ದಾರನಾಗಿರುವುದಿಲ್ಲ.

## ಶುಲ್ಕ:

1. ಬ್ಯಾಂಕ್‌ನ ಸೂಚನೆಗೆ ಅನುಗುಣವಾಗಿ ಡೆಬಿಟ್ ಕಾರ್ಡ್‌ಗೆ ಶುಲ್ಕವನ್ನು ವಿಧಿಸಲಾಗುತ್ತದೆ. ಅಂತಹ ಶುಲ್ಕಗಳನ್ನು ಕಾರ್ಡ್‌ಧಾರಕರ ಪ್ರಾಥಮಿಕ ಖಾತೆಯಿಂದ ಮುರಿಯಲಾಗುತ್ತದೆ. ಈ ಶುಲ್ಕಗಳನ್ನು ಮರುಪಾವತಿಸಲಾಗುವುದಿಲ್ಲ. ಇತರ ಸೇವೆಗಳಿಗೆ ಶುಲ್ಕವನ್ನು ಚಾಲ್ತಿಯಲ್ಲಿರುವ ದರದಲ್ಲಿ ಕಳೆಯಲಾಗುತ್ತದೆ.
2. ನಗದು ಹಿಂಪಡೆಯುವಿಕೆ/ಮೊತ್ತವಿಚಾರಣೆ ಮತ್ತು/ಅಥವಾ ಅನ್ವಯವಾಗುವಲ್ಲೆಲ್ಲಾ ವಹಿವಾಟು ಶುಲ್ಕವನ್ನು ನಗದು ವಹಿವಾಟು, ವಾಪಸಾತಿ/ಬಾಕಿ ಪರಿಶೀಲನೆ ಇತ್ಯಾದಿ ವಹಿವಾಟುಗಳು ನಡೆದ ತಕ್ಷಣವೇ ಕಾರ್ಡ್‌ಧಾರಕರ ಖಾತೆಯಿಂದ ಮುರಿಯಲಾಗುತ್ತದೆ
3. ಕಾರ್ಡ್‌ನ ಬಳಕೆಗೆ ಅನ್ವಯವಾಗುವ ಶುಲ್ಕಗಳು/ಫೀಸುಗಳು ಕಾರ್ಡ್‌ಧಾರಕರಿಗೆ ಪೂರ್ವ ಸೂಚನೆ ಇಲ್ಲದೆಯೇ ಕಾಲಕಾಲಕ್ಕೆ ಬ್ಯಾಂಕ್‌ನ ಪರಿಷ್ಕರಣೆ/ಬದಲಾವಣೆಗಳಿಗೆ ಒಳಪಟ್ಟಿರುತ್ತವೆ.

## ಕಾರ್ಡ್‌ನ ವೈಶಿಷ್ಟ್ಯಗಳು:

ಡೆಬಿಟ್ ಕಾರ್ಡ್‌ನಲ್ಲಿ ವಿವಿಧ ಸೇವೆಗಳನ್ನು ನೀಡಲು ಬ್ಯಾಂಕ್ ಕಾಲಕಾಲಕ್ಕೆ, ತನ್ನ ವಿವೇಚನೆಯಿಂದ, ವಿವಿಧ ಏಜೆನ್ಸಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳಬಹುದು. ಈ ಎಲ್ಲಾ ಸೇವೆಗಳು ಒಂದು ಉತ್ತಮ ಪ್ರಯತ್ನ ಮಾತ್ರ ಮತ್ತು ಯಾವುದೇ ಸೇವಾ ಪೂರೈಕೆದಾರರು/ವ್ಯಾಪಾರಿಗಳು/ಮಳಿಗೆಗಳು/ಏಜೆನ್ಸಿಗಳು ನೀಡುವ ಯಾವುದೇ ಉತ್ಪನ್ನಗಳು ಅಥವಾ ಸೇವೆಗಳ ಪರಿಣಾಮಕಾರಿತ್ವ, ದಕ್ಷತೆ ಅಥವಾ ಉಪಯುಕ್ತತೆಯನ್ನು ಬ್ಯಾಂಕ್ ಖಾತರಿಪಡಿಸುವುದಿಲ್ಲ ಅಥವಾ ಪ್ರಮಾಣಿಸುವುದಿಲ್ಲ. ಯಾವುದಾದರೂ ವಿವಾದಗಳಿದ್ದರೆ ಬ್ಯಾಂಕನ್ನು ಶಾಮೀಲು ಮಾಡದೆ ವ್ಯಾಪಾರಿ/ಏಜೆನ್ಸಿ ಇತ್ಯಾದಿಗಳೊಂದಿಗೆ ನೇರವಾಗಿ ನಿಭಾಯಿಸಿಕೊಳ್ಳಬೇಕು.

## ತಾತ್ಕಾಲಿಕ ನಿರ್ಬಂಧ, ನಿಷ್ಕ್ರಿಯಗೊಳಿಸುವಿಕೆ ಮತ್ತು ಸಕ್ರಿಯಗೊಳಿಸುವಿಕೆ

ಈ ಕೆಳಗಿನ ಸಂದರ್ಭಗಳಲ್ಲಿ ಕಾರ್ಡ್ ಬಳಕೆಯನ್ನು ತಾತ್ಕಾಲಿಕವಾಗಿ ("ತಾತ್ಕಾಲಿಕವಾಗಿ ನಿರ್ಬಂಧಿಸುವುದು") ಅಥವಾ ಶಾಶ್ವತವಾಗಿ ("ನಿಷ್ಕ್ರಿಯವಾಗಿಸುವುದು") ರದ್ದುಗೊಳಿಸಬಹುದು

1. ತಾತ್ಕಾಲಿಕ ನಿರ್ಬಂಧಗೊಳಿಸುವಿಕೆಗೆ ಈ ಕೆಳಗಿನ ಅಂಶಗಳು ಕಾರಣಗಳಾಗಬಹುದು
   * ಪಿನ್ ಅನ್ನು ಮರೆತ ಸಂದರ್ಭದಲ್ಲಿ
   * ಖಾತೆಯಲ್ಲಿರುವ ನಿಧಿಯನ್ನು ಯಾವುದಕ್ಕಾದರೂ ಸುರಕ್ಷೆ ಆಧಾರದಲ್ಲಿ ನೀಡುವುದಕ್ಕಾಗಿ ವಾಗ್ದಾನ ಮಾಡಿದ್ದರೆ ಅಥವಾ ಹೊಂದಾಣಿಸಿಕೊಂಡಿದ್ದರೆ
   * ಕಾರ್ಡ್‌ಧಾರಕರು ಮೇಲೆ ಹೇಳಿದ ಯಾವುದೇ ನಿಯಮಗಳನ್ನು ಉಲ್ಲಂಘಿಸಿದ್ದಲ್ಲಿ
   * ಎಟಿಎಂ ಯಂತ್ರದಲ್ಲಿ ಕಾರ್ಡ್ ಸಿಕ್ಕಿಹಾಕಿಕೊಂಡಲ್ಲಿ, * ಕಾರ್ಡ್‌ಧಾರಕರ ಸ್ವಯಂ ಕೋರಿಕೆಯ ಮೇರೆಗೆ
   * ನೀಡಿದ/ಸಕ್ರಿಯಗೊಳಿಸಿದ ದಿನಾಂಕದಿಂದ 90 ದಿನಗಳಲ್ಲಿ ಕಾರ್ಡ್ ಅನ್ನು ಬಳಸದೆ ಇದ್ದಲ್ಲಿ
2. ನಿಷ್ಕ್ರಿಯಗೊಳಿಸುವಿಕೆಗೆ ಈ ಕೆಳಗಿನ ಅಂಶಗಳು ಕಾರಣಗಳಾಗಬಹುದು
   * ಕಾರ್ಡ್‌ನ ನಷ್ಟ, ಕಳ್ಳತನ, ಹಾನಿ ಅಥವಾ ನಾಶವಾಗಿದ್ದಲ್ಲಿ
   * ಪಿನ್ ಅನ್ನು ಮರೆತ ಸಂದರ್ಭದಲ್ಲಿ
   * ಕಾರ್ಡ್‌ನ ಅವಧಿ ಮುಗಿದ ನಂತರ
   * ಈ ಸಾಮಾನ್ಯ ನಿಯಮಗಳನ್ನು ಕಾರ್ಡ್‌ಧಾರಕರು ಸಮಾಪ್ತಿಗೊಳಿಸಿದ್ದಲ್ಲಿ
   * ಈ ಸಾಮಾನ್ಯ ನಿಯಮಗಳನ್ನು ಬ್ಯಾಂಕ್ ಸಮಾಪ್ತಿಗೊಳಿಸಿದ್ದಲ್ಲಿ
   * ಖಾತೆಯನ್ನು ಮುಚ್ಚಿದ ನಂತರ
   * ಮರಣ ಅಥವಾ ದಿವಾಳಿತನ ಅಥವಾ ಕಾನೂನು ರೀತ್ಯಾ ಅಸಾಮರ್ಥ್ಯದಿಂದ
   * ಅಸ್ತಿತ್ವದಲ್ಲಿರುವ ಕಾರ್ಡ್‌ಗೆ ಬದಲಿಯಾಗಿ ಹೊಸ ಡೆಬಿಟ್ ಕಾರ್ಡ್ ನೀಡಿದ ನಂತರ,
   * ಬ್ಯಾಂಕಿನ ವಿವೇಚನೆಯಿಂದ
3. ಕಾರ್ಡ್ ಅನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲು ಕಾರ್ಡ್‌ಧಾರಕರು ಲಿಖಿತ ವಿನಂತಿಯನ್ನು ನೀಡಬೇಕಾಗಿದೆ. ಕಾರ್ಡ್‌ಧಾರಕರು ಲಿಖಿತ ವಿನಂತಿಯನ್ನು ಮಾಡಲು ಸಾಧ್ಯವಾಗದಿದ್ದಾಗ, ಬೇರೆ ರೀತಿಯಲ್ಲಾದರೂ ವಿನಂತಿಯನ್ನು ಮಾಡಿದರೆ, ಬ್ಯಾಂಕ್ ತನ್ನ ವಿವೇಚನೆಯಿಂದ ಕಾರ್ಡ್ ಅನ್ನು ತಾತ್ಕಾಲಿಕವಾಗಿ ನಿರ್ಬಂಧಿಸಬಹುದು. ಆದರೆ ಅಂತಹ ವಿನಂತಿಯನ್ನು ಸೂಕ್ತ ಸಮಯದೊಳಗೆ ಕಾರ್ಡ್‌ಧಾರಕರು ಲಿಖಿತವಾಗಿ ದೃಢೀಕರಿಸಲು ಬದ್ಧರಾಗಿರುತ್ತಾರೆ. ಆದಾಗ್ಯೂ, ತಾತ್ಕಾಲಿಕ ನಿರ್ಬಂಧದಿಂದ ಉಂಟಾಗುವ ಯಾವುದೇ ನಷ್ಟ ಅಥವಾ ಹಾನಿಗಳಿಗೆ ಬ್ಯಾಂಕ್ ಜವಾಬ್ದಾರನಾಗಿರುವುದಿಲ್ಲ.

4. ನಿರ್ಬಂಧಿಸುವ ಮೊದಲು ವರದಿ ಮಾಡುವ ವ್ಯಕ್ತಿಯ ಗುರುತನ್ನು ಪರಿಶೀಲಿಸುವ ಸಲುವಾಗಿ ಕಾರ್ಡ್‌ಧಾರಕರು ಮತ್ತು ಖಾತೆಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ವಿನಂತಿಸಲು ಬ್ಯಾಂಕ್‌ಗೆ ಅರ್ಹತೆ ಇದೆ.
5. ಕಾರ್ಡ್‌ಧಾರಕರ ಲಿಖಿತ ಕೋರಿಕೆಯ ನಂತರವೇ ಅದನ್ನು ಪುನಃ ಸಕ್ರಿಯಗೊಳಿಸಲಾಗುವುದು ಅದುವರೆಗೆ ಕಾರ್ಡ್ ತಾತ್ಕಾಲಿಕವಾಗಿ ನಿರ್ಬಂಧಗೊಂಡಿರುತ್ತದೆ.
6. ಕಳೆದುಹೋಯಿತೆಂದು ದಾಖಲಿಸಲಾದ ಕಾರ್ಡ್, ಇನ್ನೂ ಮಾನ್ಯತೆಯ ಅವಧಿಯೊಳಗೆ ಇದ್ದು, ಒಂದು ವೇಳೆ ಕಾರ್ಡ್‌ಧಾರಕರಿಗೆ ತರುವಾಯ ಕಾರ್ಡ್ ಅನ್ನು ಪತ್ತೆಹಚ್ಚಲು/ಹುಡುಕಲು ಸಾಧ್ಯವಾದರೆ, ಅವರು ಅದನ್ನು ಬ್ಯಾಂಕಿಗೆ ತಿಳಿಸಿ ಮತ್ತು ಸಕ್ರಿಯಗೊಳಿಸಲು ವಿನಂತಿಯನ್ನು ಸಲ್ಲಿಸಬಹುದು. ಅಂತಹ ಸಂದರ್ಭದಲ್ಲಿ, ಕಳೆದುಹೋದ ಕಾರ್ಡ್‌ಗೆ ಬದಲಾಗಿ ಯಾವುದೇ ಕಾರ್ಡ್ ನೀಡಿರದಿದ್ದಲ್ಲಿ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ ಕಾರ್ಡ್ ಅನ್ನು ಸಕ್ರಿಯಗೊಳಿಸಬಹುದು.
7. ಕಾರ್ಡ್‌ನ ನಷ್ಟ, ಕಳ್ಳತನ, ಹಾನಿ ಅಥವಾ ವಿನಾಶದ ಸಂದರ್ಭದಲ್ಲಿ, ಕಾರ್ಡ್‌ಧಾರಕರು ಹೊಸ ಕಾರ್ಡ್ ನೀಡುವ ಸಲುವಾಗಿ ಲಿಖಿತ ವಿನಂತಿಯನ್ನು ಸಲ್ಲಿಸಬೇಕು. ಹಾನಿಗೊಳಗಾದ ಕಾರ್ಡ್‌ನ್ನು ಹಿಂದಿರುಗಿಸಿದ, ಲಿಖಿತ ಕೋರಿಕೆ ಸಲ್ಲಿಸಿದ್ದಲ್ಲಿ ಅದರ ಬದಲಿಗೆ ಬ್ಯಾಂಕ್ ಹೊಸ ಕಾರ್ಡ್ ಅನ್ನು ನೀಡಬಹುದು
8. ನ್ಯಾಯಾಲಯ ಅಥವಾ ಇತರ ಪ್ರಾಧಿಕಾರದ ಆದೇಶಕ್ಕೆ ಅನುಗುಣವಾಗಿ ಬ್ಯಾಂಕ್ ನಿರ್ದಿಷ್ಟ ಖಾತೆಯ ಕಾರ್ಯಾಚರಣೆಗೆ ನಿರ್ಬಂಧ ಹೇರಿ ಕಾರ್ಡ್ ಅನ್ನು ನಿಷ್ಕ್ರಿಯಗೊಳಿಸುತ್ತದೆ
9. ಭದ್ರತಾ ಕಾರಣಗಳಿಗಾಗಿ, ಸಾಕಷ್ಟು ಹಣ/ಕನಿಷ್ಠ ಮೊತ್ತವನ್ನು ನಿರ್ವಹಿಸದಿರುವುದು, ಕಾರ್ಡ್‌ನ ದುರುಪಯೋಗದ ಅನುಮಾನದ ಸಂದರ್ಭದಲ್ಲಿ ಮತ್ತು ಅಗತ್ಯವಿದ್ದರೆ ಖಾತೆದಾರರನ್ನು ಹಾನಿಗಳಿಂದ ರಕ್ಷಿಸುವ ಹಿತದೃಷ್ಟಿಯಿಂದ ಕಾರ್ಡ್ ಅನ್ನು ನಿರ್ಬಂಧಿಸಲು ಬ್ಯಾಂಕ್‌ಗೆ ಅರ್ಹತೆ ಇರುತ್ತದೆ
10. ಕಳೆದುಹೋದ ಅಥವಾ ಕಳವುಗೊಂಡ ಕಾರ್ಡ್ ಅನ್ನು ನಿರ್ಬಂಧಿಸುವ ಅಥವಾ ನಿಷ್ಕ್ರಿಯಗೊಳಿಸುವ ಮುನ್ನವೇ ಅದರ ಅನಧಿಕೃತ ಬಳಕೆಯಿಂದ ಉಂಟಾಗುವ ಯಾವುದೇ ಹಾನಿಗಳಿಗೆ ಬ್ಯಾಂಕ್ ಜವಾಬ್ದಾರನಾಗಿರುವುದಿಲ್ಲ.

### ಕಳೆದುಹೋದ ಅಥವಾ ಕಳವು ಮಾಡಿದ ಕಾರ್ಡ್

1. ಕಾರ್ಡ್ ಕಳೆದುಹೋದರೆ ಅಥವಾ ಕಳವುಗೊಂಡಿದ್ದರೆ, ಕಾರ್ಡ್ ಅನ್ನು ಹಾಟ್ ಲಿಸ್ಟಿಂಗ್ ಮಾಡಲು ಕಾರ್ಡ್‌ಧಾರಕರು ತಕ್ಷಣವೇ ಬ್ಯಾಂಕಿಗೆ ವರದಿ ಮಾಡಬೇಕು. ನಷ್ಟ ಅಥವಾ ಕಳ್ಳತನವನ್ನು ಬ್ಯಾಂಕಿನ ಟೋಲ್ ಫ್ರೀ ಸಹಾಯ ವಾಣಿಯ ಮೂಲಕ ವರದಿ ಮಾಡಬಹುದಾದರೂ, ಕಾರ್ಡ್‌ಧಾರಕರು ಸಾಧ್ಯವಾದಷ್ಟು ಬೇಗ ಅದನ್ನು ಬ್ಯಾಂಕ್‌ಗೆ ಲಿಖಿತವಾಗಿ ದೃಢೀಕರಿಸಬೇಕು. ಲಿಖಿತ ದೃಢೀಕರಣದೊಂದಿಗೆ ಅಂಗೀಕರಿಸಲ್ಪಟ್ಟ ಪೊಲೀಸ್ ದೂರಿನ ಪ್ರತಿ ಇರಬೇಕು.
2. ಬ್ಯಾಂಕಿಗೆ ಕಾರ್ಡ್‌ನ ನಷ್ಟ/ಕಳ್ಳತನ ವರದಿಯಾದ ನಂತರ, ಆ ಕಾರ್ಡ್‌ನಲ್ಲಿ ಮಾಡಿದ ಯಾವುದೇ ಖರೀದಿ ವಹಿವಾಟಿನಿಂದ ಉಂಟಾಗುವ ಹಣಕಾಸಿನ ಹೊಣೆಗಾರಿಕೆಯಿಂದ ಮುಕ್ತರಾಗುತ್ತಾರೆ. ಎಟಿಎಂ ಮೂಲಕ ನಗದು ಹಿಂಪಡೆಯುವಿಕೆ ಮತ್ತು ವ್ಯಾಪಾರಿ ಪ್ರತಿಷ್ಠಾನಗಳಲ್ಲಿ (ಪಿನ್ @ ಪಿಒಎಸ್) ಇಂತಹ ಯಾವುದೇ ವಹಿವಾಟು ಮಾಡಲು ಸಾಧ್ಯವಿಲ್ಲ ಎಂಬುದನ್ನು ಗಮನಿಸಬೇಕು. ಏಕೆಂದರೆ ಅಂತಹ ವಹಿವಾಟುಗಳನ್ನು ಪಿನ್ ನಿಯಂತ್ರಿಸುತ್ತದೆ ಮತ್ತು ಇದು ಗೌಪ್ಯವಾಗಿರುತ್ತದೆ ಹಾಗೂ ಕಾರ್ಡ್‌ಧಾರಕರಿಗೆ ಮಾತ್ರ ತಿಳಿದಿರುತ್ತದೆ.
3. ಕಾರ್ಡ್ ಕಳೆದುಹೋದಾಗ ಅದನ್ನು ಬ್ಯಾಂಕಿಗೆ ವರದಿ ಮಾಡದಿದ್ದಲ್ಲಿ ಅಥವಾ ಕಳೆದುಹೋದಾಗ, ಅದನ್ನು ಬ್ಯಾಂಕ್‌ಗೆ ವರದಿ ಮಾಡುವ ಮೊದಲೇ ದುರುಪಯೋಗಗೊಂಡ ಸಂದರ್ಭದಲ್ಲಿ ಉಂಟಾಗುವ ಯಾವುದೇ ಹೊಣೆಗಾರಿಕೆ (ನಾಗರಿಕ ಅಥವಾ ಅಪರಾಧ ಸಂಬಂಧಿ), ನಷ್ಟ, ಖರ್ಚುವೆಚ್ಚಗಳು ಅಥವಾ ಹಾನಿಗಳ ವಿರುದ್ಧ ಬ್ಯಾಂಕನ್ನು ಸಂಪೂರ್ಣವಾಗಿ ರಕ್ಷಿಸಲು ಕಾರ್ಡ್‌ಧಾರಕರು ಬದ್ಧರಾಗಿರುತ್ತಾರೆ.
4. ಕಳೆದುಹೋದ/ಕಳವು ಮಾಡಿದ ಕಾರ್ಡ್ ತರುವಾಯ ದೊರೆತರೆ, ಕಾರ್ಡ್‌ಧಾರಕರು ಅದನ್ನು ಮರು ಬಳಸಬಾರದು. ಬದಲಿಗೆ ಕಾರ್ಡ್ ಅನ್ನು ಕರ್ಣಾಟಕ ಬ್ಯಾಂಕ್ ಶಾಖೆಗೆ ಹಿಂತಿರುಗಿಸಬೇಕು ಅಥವಾ ಕಾರ್ಡ್ ಅನ್ನು ಹಲವಾರು ತುಂಡುಗಳಾಗಿ ಕತ್ತರಿಸಿ ಹೊಸ ಕಾರ್ಡ್ ಪಡೆಯಬೇಕು.

### ವರದಿ ಮತ್ತು ದಾಖಲೆಗಳು:

1. ಕಾರ್ಡ್ ವಹಿವಾಟಿನ ದಾಖಲೆಗಳು ಬ್ಯಾಂಕ್ ನೀಡುವ ಖಾತೆ ವರದಿಯಲ್ಲಿ ಮತ್ತು/ಅಥವಾ ಗ್ರಾಹಕರು ಬ್ಯಾಂಕ್ ಮೂಲಕ ಮುದ್ರಿಸಿಕೊಂಡು ಪಡೆಯುವ ಖಾತೆಯ ಪಾಸ್‌ಪುಸ್ತಕದಲ್ಲಿ ಲಭ್ಯವಿರುತ್ತವೆ. ಗ್ರಾಹಕನು ತನ್ನ ಖಾತೆಯನ್ನು ನಿರ್ವಹಿಸುವ ಶಾಖೆಯಿಂದ ಪಾಸ್‌ಪುಸ್ತಕವನ್ನು ನಿಯತವಾಗಿ ತಿಂಗಳಿಗೆ ಒಮ್ಮೆಯಾದರೂ ಮುದ್ರಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ.
2. ಕಾರ್ಡ್‌ನ ಬಳಕೆಯಿಂದ ಉಂಟಾಗುವ ವಹಿವಾಟಿನ ಬ್ಯಾಂಕ್ ದಾಖಲೆಯು ನಿರ್ಣಾಯಕವಾಗಿರುತ್ತದೆ ಮತ್ತು ಎಲ್ಲಾ ಉದ್ದೇಶಗಳಿಗಾಗಿ ಅಂತಿಮವಾಗಿರುತ್ತದೆ. ನಿಮ್ಮ ಬ್ಯಾಂಕ್ ಖಾತೆ ವರದಿಯಲ್ಲಿ ಕಂಡುಬರುವ ಡೆಬಿಟ್ ಕಾರ್ಡ್ ವಹಿವಾಟನ್ನು ನೀವು ಗುರುತಿಸದಿದ್ದರೆ, ನೀವು ನಮ್ಮನ್ನು ಕೇಳಿದರೆ, ಅಂತಹ ವಹಿವಾಟಿನ ಕುರಿತು ಹೆಚ್ಚಿನ ವಿವರಗಳನ್ನು ಒದಗಿಸಲು ನಾವು ಪ್ರಯತ್ನಿಸುತ್ತೇವೆ. ಆದಾಗ್ಯೂ ಯಾವುದೇ ವ್ಯತ್ಯಾಸ ಅಥವಾ ಶಂಕಿತ ವಹಿವಾಟು ಕಂಡುಬಂದಲ್ಲಿ ಅಂತಹ ಶಂಕಿತ ವಹಿವಾಟಿನ ದಿನಾಂಕದಿಂದ 30 ದಿನಗಳಲ್ಲಿ ಒಳಗಾಗಿ ಲಿಖಿತವಾಗಿ ಬ್ಯಾಂಕ್‌ಗೆ ತಿಳಿಸಬೇಕು ಮತ್ತು ನೀವು ಅಂತಹ ವಹಿವಾಟನ್ನು ನಡೆಸಿಲ್ಲ ಎಂಬ ದೃಢೀಕರಣ ಅಥವಾ ಪುರಾವೆಗಳನ್ನು ನಮಗೆ ನೀಡಬೇಕಾಗಬಹುದು.

30 ದಿನಗಳಲ್ಲಿ ವರದಿ ಮಾಡದ ಅಂತಹ ಯಾವುದೇ ಮಾಹಿತಿ/ದೂರನ್ನು ಪರಿಗಣಿಸಲಾಗುವುದಿಲ್ಲ. ಶಂಕಿತ ವಹಿವಾಟಿನ ದೂರುಗಳನ್ನು ಸ್ವೀಕರಿಸಿದ ನಂತರ, 7 ದಿನಗಳಲ್ಲಿ ಇತ್ಯರ್ಥಗೊಳಿಸಲು ಪ್ರಯತ್ನಿಸಲಾಗುವುದು. ಆದಾಗ್ಯೂ, ಅದು ಯಶಸ್ವಿ ವಹಿವಾಟು ಎಂದು ಅಕ್ವೈರರ್ ಸಾಬೀತುಪಡಿಸಿದರೆ ಅದೇ ಮೊತ್ತವನ್ನು ಮುಂದಿನ 60 ದಿನಗಳಲ್ಲಿ ನಿಮ್ಮ ಖಾತೆಗೆ ಹಿಂದಿರುಗಿಸಲಾಗುತ್ತದೆ

### ವಿವಾದಗಳು:

1. ಖರೀದಿ ವಹಿವಾಟಿನ ಸಂದರ್ಭದಲ್ಲಿ, ಕಾರ್ಡ್‌ಧಾರಕರ ಸಹಿಯಿರುವ ರಶೀದಿಯು, ಅದರಲ್ಲಿ ನಮೂದಿಸಲಾದ ಕಾರ್ಡ್ ಸಂಖ್ಯೆಯೊಂದಿಗೆ ಕಾರ್ಡ್‌ಧಾರಕ ಹೊಣೆಗಾರಿಕೆಗೆ ಬ್ಯಾಂಕ್ ಮತ್ತು ಕಾರ್ಡ್‌ಧಾರಕರ ನಡುವೆ ನಿರ್ಣಾಯಕ ಪುರಾವೆ ಆಗಿರುತ್ತದೆ. ಕಾರ್ಡ್‌ಧಾರಕರು ಕಾರ್ಡ್‌ಧಾರಕರು ಖರೀದಿಸಿದ ಸರಕುಗಳನ್ನು ಸ್ವೀಕರಿಸಿದ್ದಾರೆಯೇ/ಸೇವೆಗಳನ್ನು ಪಡೆದಿದ್ದಾರೆಯೇ ಎಂದು ಬ್ಯಾಂಕ್ ಖಚಿತಪಡಿಸಿಕೊಳ್ಳಬೇಕಾದ ಅಗತ್ಯವಿಲ್ಲ.
2. ಖಾತಾ ವರದಿವರದಿಯಲ್ಲಿ ಸೂಚಿಸಲಾದ ಶುಲ್ಕದ ಕುರಿತು ಅಥವಾ ಯಾವುದೇ ಭಿನ್ನಾಭಿಪ್ರಾಯದ ಬಗ್ಗೆ ಅಸಂತೃಪ್ತ ಗ್ರಾಹಕರಿಂದ ದೂರನ್ನು ಸ್ವೀಕರಿಸಿದ ಎರಡು ತಿಂಗಳೊಳಗೆ ಆ ಭಿನ್ನಾಭಿಪ್ರಾಯವನ್ನು ಪರಿಹರಿಸಲು ಬ್ಯಾಂಕ್ ಪ್ರಾಮಾಣಿಕ ಮತ್ತು ಸಮಂಜಸವಾದ ಪ್ರಯತ್ನಗಳನ್ನು ಮಾಡುತ್ತದೆ. ಅಂತಹ ಪ್ರಯತ್ನದ ನಂತರ ಶುಲ್ಕ ತಪ್ಪಾಗಿದೆ ಎಂದು ಬ್ಯಾಂಕ್ ನಿರ್ಧರಿಸಿದರೆ, ಕಾರ್ಡ್‌ಧಾರಕರಿಗೆ ಅದನ್ನು ಹಿಂದಿರುಗಿಸುತ್ತದೆ.
3. ಕಾರ್ಡ್ ಅನ್ನು ಸ್ವೀಕರಿಸಲು ಅಥವಾ ಗೌರವಿಸಲು ಯಾವುದೇ ವ್ಯಾಪಾರಿ ಸಂಸ್ಥೆಯು ನಿರಾಕರಿಸಿದರೆ, ಅದಕ್ಕೆ ಬ್ಯಾಂಕ್ ಯಾವುದೇ ರೀತಿಯಲ್ಲಿ ಜವಾಬ್ದಾರನಾಗಿರುವುದಿಲ್ಲ ಅಥವಾ ಹೊಣೆಗಾರರಾಗಿರುವುದಿಲ್ಲ.
4. ಈ ಒಪ್ಪಂದವು ಭಾರತದ ಕಾನೂನುಗಳಿಗೆ ಅನುಸಾರವಾಗಿದೆ ಮತ್ತು ಅದರ ಪ್ರಕಾರ ನಿಯಂತ್ರಿಸಲ್ಪಡುತ್ತದೆ. ಯಾವುದೇ ನ್ಯಾಯಾಲಯವು ಈ ವಿಷಯದಲ್ಲಿ ಸಮವರ್ತಿ ನ್ಯಾಯವ್ಯಾಪ್ತಿಯನ್ನು ಹೊಂದಿದ್ದರೂ ಮತ್ತು ಭಾರತೀಯ ಕಾನೂನು ಪ್ರಕಾರ ನಿಯಂತ್ರಣಕ್ಕೆ ಒಳಪಟ್ಟಿದ್ದರೂ, ಎಲ್ಲಾ ವಿವಾದಗಳು ಮಂಗಳೂರು ನ್ಯಾಯಾಲಯಗಳ ವಿಶೇಷ ನ್ಯಾಯವ್ಯಾಪ್ತಿಗೇ ಒಳಪಟ್ಟಿರುತ್ತವೆ.
5. ಬಾಕಿ ಸಂಗ್ರಹಣೆ, ಕಾನೂನು ವೆಚ್ಚಗಳು (ಯಾವುದೇ ಏಜೆಂಟ್) ಈ ಸಹಾಯವನ್ನು ಪಡೆಯುವುದು ಅಗತ್ಯವಾಗಿದ್ದರೆ), ಅಥವಾ ವಿವಾದದ ಪರಿಹಾರಕ್ಕೆ ಕಾನೂನು ಸಂಪನ್ಮೂಲಗಳನ್ನು ಬಳಸಿಕೊಂಡಿದ್ದರೆ ಎಲ್ಲ ವೆಚ್ಚಗಳಿಗೆ ಕಾರ್ಡ್‌ಧಾರಕರು ಜವಾಬ್ದಾರರಾಗಿರುತ್ತಾರೆ.
6. ಕಾರ್ಡ್‌ಧಾರಕರು ಖರೀದಿಸಿದ ಅಥವಾ ಪಡೆದ ಸರಕು ಅಥವಾ ಸೇವೆಗಳು ದೋಷಪೂರಿತವಾಗಿದ್ದಲ್ಲಿ ಅಥವಾ ಸರಕು ಸರಬರಾಜು ಆಗದಿದ್ದಲ್ಲಿ ಅಥವಾ ದೋಷಯುಕ್ತ ಸರಬರಾಜು ಅಥವಾ ಗುಣಮಟ್ಟ ಅಥವಾ ಪ್ರಮಾಣ ಅಥವಾ ದರಗಳಲ್ಲಿ ವ್ಯತ್ಯಾಸ ನೇರವಾಗಿ ಅಥವಾ ಸರಕು ಅಥವಾ ಸೇವೆಗಳ ವಿತರಣೆಯಲ್ಲಿ ದೋಷ ಮತ್ತು ಅಂತಹ ಯಾವುದೇ ವಿವಾದಗಳು ಇದ್ದಲ್ಲಿ, ಬ್ಯಾಂಕ್ ಅದಕ್ಕೆ ಬಾಧ್ಯತೆಯನ್ನು ಅಥವಾ ಜವಾಬ್ದಾರಿಯನ್ನು ಹೊಂದಿರುವುದಿಲ್ಲ ಅವುಗಳನ್ನು ಕಾರ್ಡ್‌ಧಾರಕರು ವ್ಯಾಪಾರಿ ಪ್ರತಿಷ್ಠಾನದೊಂಂದಿಗೆ ಪರಿಹರಿಸಿಕೊಳ್ಳಬೇಕು.
7. ಬ್ಯಾಂಕಿನ ನಿಯಂತ್ರಣದಲ್ಲಿರುವ ಯಂತ್ರಗಳ ಅಸಮರ್ಪಕ ಕಾರ್ಯದಿಂದಾಗಿ ಕಾರ್ಡ್‌ಧಾರಕರಿಗೆ ಉಂಟಾಗುವ ನೇರ ನಷ್ಟಗಳಿಗೆ ಬ್ಯಾಂಕ್ ಜವಾಬ್ದಾರನಾಗಿರುತ್ತದೆ. ಆದಾಗ್ಯೂ, ಬ್ಯಾಂಕ್‌ನ ನಿಯಂತ್ರಣದಲ್ಲಿ ಇಲ್ಲದ, ಪಾವತಿ ವ್ಯವಸ್ಥೆಯ ತಾಂತ್ರಿಕ ಸ್ಥಗಿತದಿಂದ ಉಂಟಾಗುವ ಯಾವುದೇ ನಷ್ಟಕ್ಕೆ ಬ್ಯಾಂಕ್ ತನ್ನ ಜವಾಬ್ದಾರಿಯನ್ನು ಹೊಂದುವುದಿಲ್ಲ. ಇದಲ್ಲದೆ, ಯಂತ್ರವು ದೋಷಪೂರಿತವಾಗಿದ್ದರೆ ಅದರ ಪರದೆಯ ಮೇಲೆ ಬಿತ್ತರಗೊಳ್ಳುವ ಸಂದೇಶದ ಮೂಲಕ ಕಾರ್ಡ್‌ಧಾರಕರು ಗುರುತಿಸಬಹುದು, ನಡೆಯದ ವಹಿವಾಟು ಅಥವಾ ದೋಷಯುಕ್ತ ವಹಿವಾಟಿನ ಕುರಿತಾದ ಬ್ಯಾಂಕಿನ ಜವಾಬ್ದಾರಿಯು ಅದಕ್ಕೆ ಸಂಬಂಧಿಸಿದ ಮೂಲ ಮೊತ್ತಕ್ಕೆ ಸೀಮಿತವಾಗಿರುತ್ತದೆ ಮತ್ತು ಬಡ್ಡಿಯ ನಷ್ಟವು ಸಂಬಂಧಪಟ್ಟ ಕಾನೂನಿನ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

### ಸಮಾಪ್ತಿ

1. ಯಾವುದೇ ಸಮಯದಲ್ಲಿ ಮುನ್ಸೂಚನೆ ಇಲ್ಲದೆ ಮತ್ತು ಯಾವುದೇ ಕಾರಣವನ್ನು ನೀಡದೆ ಕಾರ್ಡ್ ಅಥವಾ ಇತರ ಯಾವುದೇ ಸೇವೆಗಳನ್ನು ರದ್ದುಗೊಳಿಸುವ/ಹಿಂತೆಗೆದುಕೊಳ್ಳುವ ಹಕ್ಕನ್ನು ಬ್ಯಾಂಕ್ ಹೊಂದಿದೆ.
2. ಕಾರ್ಡ್‌ಧಾರಕರು ಬ್ಯಾಂಕಿನ ತನ್ನ ಖಾತೆಯನ್ನು ಮುಚ್ಚಲು ನಿರ್ಧರಿಸಿದಲ್ಲಿ ತನ್ನ ಖಾತೆಗೆ ಪ್ರಾಥಮಿಕ ಖಾತೆಯಾಗಿ ಪರಿಗಣಿಸಿ ನೀಡಲಾದ ಕಾರ್ಡ್ (ಗಳು) ಸ್ವಯಂಚಾಲಿತವಾಗಿ ರದ್ದಾಗುತ್ತದೆ. ಕಾರ್ಡ್‌ಧಾರಕರು ತಮ್ಮ ಕಾರ್ಡ್ ಬಳಸುವುದನ್ನು ತಕ್ಷಣವೇ ನಿಲ್ಲಿಸಬೇಕು ಮತ್ತು ಈ ಖಾತೆಗೆ ಲಿಂಕ್ ಮಾಡಲಾದ ಅವನ ಎಲ್ಲಾ/ಹೆಚ್ಚುವರಿ ಕಾರ್ಡ್‌ಗಳನ್ನು ನಾಶಪಡಿಸಬೇಕು. ಒಂದು ವೇಳೆ ಕಾರ್ಡ್ ವ್ಯವಹಾರಕ್ಕೆ ಸಂಬಂಧ ಪಟ್ಟಂತೆ ಯಾವುದೇ ಮೊತ್ತವು ಇನ್ನೂ ಆತನ ಖಾತೆಯಿಂದ ಕಮ್ಮಿಯಾಗಿರದಿದ್ದರೆ ಬ್ಯಾಂಕ್ ಆತನ ಖಾತೆಯ ಹಣವನ್ನು ಅವನಿಗೆ ಹಿಂದಿರುಗಿಸುವ ಮೊದಲು ಬಾಕಿ ಮೊತ್ತವನ್ನು ಉಳಿಸಿಕೊಳ್ಳುತ್ತದೆ.
3. ಕಾರ್ಡ್‌ಧಾರಕರು ಕಾರ್ಡ್‌ನ ಬಳಕೆಯನ್ನು ಕೊನೆಗೊಳಿಸಲು ನಿರ್ಧರಿಸಿದಲ್ಲಿ, ಕನಿಷ್ಠ ಏಳು (7) ದಿನಗಳ ಪೂರ್ವಭಾವಿ ಸೂಚನೆಯನ್ನು ಲಿಖಿತವಾಗಿ ಬ್ಯಾಂಕ್‌ಗೆ ನೀಡಬೇಕು ಮತ್ತು ಕಾರ್ಡ್ ಮತ್ತು ಹೆಚ್ಚುವರಿ ಕಾರ್ಡ್ ಯಾವುದಾದರೂ ಇದ್ದರೆ, ಅದನ್ನು ಹಿಂದಿರುಗಿಸಬೇಕು. ಆದಾಗ್ಯೂ, ಕಾರ್ಡ್ ಸೌಲಭ್ಯವನ್ನು ರದ್ದುಗೊಳಿಸಿದ ಬಳಿಕ, ಈಗಾಗಲೇ ನಡೆದ ವಹಿವಾಟುಗಳು, ಶಾಖೆಗೆ ವರದಿಯಾದರೆ, ಅದನ್ನು ಆತ ಖಾತೆಗೆ ಅನ್ವಯಿಸಲಾಗುತ್ತದೆ ಕಾರ್ಡ್ ಅನ್ನು ನಾಶಪಡಿಸಿದೆ ಎಂದು ಕಾರ್ಡ್‌ಧಾರಕರು ಹೇಳಿಕೊಂಡರೂ, ಕಾರ್ಡ್ ರದ್ದಾಗಿದ್ದರೂ, ಕಾರ್ಡ್‌ನಲ್ಲಿನ ಎಲ್ಲಾ ಸೌಲಭ್ಯಗಳು ಮತ್ತು ಸಂಬಂಧಿತ ಶುಲ್ಕಗಳಿಗೆ ನಿಯಮ ಮತ್ತು ಷರತ್ತುಗಳ ಪ್ರಕಾರ ಕಾರ್ಡ್‌ಧಾರಕರು ಜವಾಬ್ದಾರರಾಗಿರುತ್ತಾರೆ. ದುರುಪಯೋಗ/ಮೋಸದ ಬಳಕೆಯಿಂದಾಗಿ ಅಥವಾ ಬ್ಯಾಂಕ್‌ಗೆ ಕಾರ್ಡ್ ನಾಶದ ಬಗ್ಗೆ ತಿಳಿಸಲಾಗಿದ್ದರೂ, ಇಲ್ಲದಿದ್ದರೂ ಕಾರ್ಡ್‌ನಲ್ಲಿ ಉಂಟಾಗುವ ಎಲ್ಲಾ ಶುಲ್ಕಗಳಿಗೆ ಕಾರ್ಡ್‌ಧಾರಕರು ಜವಾಬ್ದಾರರಾಗಿರುತ್ತಾರೆ.
4. ಕಾರ್ಡ್ ಅನ್ನು ಹಿಂದಿರುಗಿಸದಿದ್ದರೆ ಮತ್ತು ಬಾಕಿ ಹಣವನ್ನು ಪಾವತಿಸದ ಹೊರತು ಗೊತ್ತುಪಡಿಸಿದ ಖಾತೆಯನ್ನು/ಗಳನ್ನು ಮುಚ್ಚುವುದು, ವರ್ಗಾಯಿಸುವುದು ಅಥವಾ ಕಾರ್ಯನಿರ್ವಹಣಾ ವಿಧಾನದಲ್ಲಿ ಯಾವುದೇ ಬದಲಾವಣೆಯನ್ನು ಅನುಮತಿಸಲಾಗುವುದಿಲ್ಲ.
5. ಈ ಕೆಳಗಿನ ಯಾವುದೇ ಸಂದರ್ಭದಲ್ಲಿ ಕಾರ್ಡ್ ಅನ್ನು ರದ್ದು ಪಡಿಸಲು ಬ್ಯಾಂಕಿಗೆ ಅರ್ಹತೆ ಇರುತ್ತದೆ ಮತ್ತು ಕಾರ್ಡ್‌ನ್ನು ಕೂಡಲೇ ಹಿಂತಿರುಗಿಸಬೇಕಾಗುತ್ತದೆ.
   * ಇಲ್ಲಿ ಸೂಚಿಸಲಾದ ನಿಯಮ ಮತ್ತು ಷರತ್ತುಗಳನ್ನು ಅನುಸರಿಸಲು ವಿಫಲವಾದಲ್ಲಿ,
   * ಬ್ಯಾಂಕ್‌ನೊಂದಿಗೆ ನಡೆಸಲಾದ ಒಪ್ಪಂದ ಅಥವಾ ಬದ್ಧತೆಯ ಅಡಿಯಲ್ಲಿ ವಿಫಲರಾದ ಸಂಧರ್ಭದಲ್ಲಿ, (ಆಕಸ್ಮಿಕವಾಗಿ ಅಥವಾ ಅಲ್ಲದಿದ್ದರೂ).
   * ಕಾರ್ಡ್‌ಧಾರಕರು ಯಾವುದೇ ದಿವಾಳಿತನಕ್ಕೆ ಗುರಿಯಾಗಿದ್ದರೆ ಅಥವಾ ಯಾವುದಾದರೂ ಅಂತಹುದೇ ರೀತಿಯ ವಿಚಾರಣೆಯಲ್ಲಿ ಭಾಗಿಯಾಗಿದ್ದರೆ.
   * ಕಾರ್ಡ್‌ಧಾರಕರು ಮರಣ ಹೊಂದಿದ್ದರೆ
   * ಕಾರ್ಡ್‌ಧಾರಕರು ಖಾತೆಯ ಮುಚ್ಚುವಿಕೆ ಅಥವಾ ಹೇಳಿದ ಖಾತೆಯಲ್ಲಿ ಕನಿಷ್ಠ ಸರಾಸರಿ ಮೊತ್ತವನ್ನು ಕಾಯ್ದುಕೊಳ್ಳುವಲ್ಲಿ ವಿಫಲನಾಗಿದ್ದರೆ.
   * ಕಾರ್ಡ್‌ಧಾರಕರು ಮಾನಸಿಕವಾಗಿ ಉನ್ಮಾದಕ್ಕೊಳಗಾದುದು ಅಥವಾ ಅಸ್ವಸ್ಥತೆಗೆ ಒಳಗಾದುದು ತಿಳಿದುಬಂದರೆ,
   * ಯಾವುದೇ ರೀತಿಯಲ್ಲಿ ಸೌಲಭ್ಯವನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ/ಸರಿಯಾಗಿ ಬಳಸಲಾಗುತ್ತಿಲ್ಲ ಎಂದು ಬ್ಯಾಂಕ್‌ಗೆ ತಿಳಿದುಬಂದರೆ,
   * ನೆಟ್‌ವರ್ಕ್‌ನಲ್ಲಿನ ಯಾವುದೇ ಬ್ಯಾಂಕುಗಳು/ಶಾಖೆಗಳಿಂದ ಯಾವುದೇ ಪ್ರತಿಕೂಲ ವರದಿ ಬಂದರೆ,
   * ಅರ್ಜಿಯಲ್ಲಿ ನೀಡಲಾದ ಮಾಹಿತಿಯು ತಪ್ಪಾಗಿದೆ ಅಥವಾ ಸುಳ್ಳು ಎಂದು ಕಂಡುಬಂದಲ್ಲಿ ಅಥವಾ ಸತ್ಯವನ್ನು ತಪ್ಪಾಗಿ ನಿರೂಪಿಸಿದ ಸಂದರ್ಭದಲ್ಲಿ
6. ಕಾರ್ಡ್‌ಗೆ ಅನ್ವಯವಾಗುವ ವೈಶಿಷ್ಟ್ಯಗಳು, ಇರುವ ನಿಯಮ ಮತ್ತು ಷರತ್ತುಗಳಿಗೆ ಸಂಬಂಧಪಟ್ಟಂತೆ ಯಾವುದೇ ಪ್ರಸ್ತಾಪಿತ ಬದಲಾವಣೆಗಳನ್ನು ಕಾರ್ಡ್‌ಧಾರಕರು ತಿರಸ್ಕರಿಸಿದಲ್ಲಿ, ಬದಲಾವಣೆಗಳು ಜಾರಿಗೆ ಬರುವ ದಿನಾಂಕಕ್ಕಿಂತ ಮೊದಲೇ ಡೆಬಿಟ್ ಕಾರ್ಡ್ ಅನ್ನು ಬ್ಯಾಂಕಿಗೆ ಹಿಂತಿರುಗಿಸಬೇಕು.

### ಭದ್ರತೆ:

ಈ ಕೆಳಗಿನ ಕಾರಣಗಳಿಂದಾಗಿ ಬ್ಯಾಂಕ್‌ಗೆ ಆಗಬಹುದಾದ ಎಲ್ಲಾ ನಷ್ಟ, ಹಾನಿಗಳು, ಮತ್ತು ಎದುರಾಗಬಹುದಾದ ಕಾರ್ಡ್‌ಧಾರಕರ ದಾವೆಗಳ ವಿರುದ್ಧ ಬ್ಯಾಂಕ್‌ಗೆ ಹಾನಿಯಾಗದಂತೆ ಮತ್ತು ನಷ್ಟವುಂಟಾಗದಂತೆ ಕಾರ್ಡ್‌ಧಾರಕರು ರಕ್ಷಿಸಲು ಬದ್ಧನಾಗಿರುತ್ತಾನೆ.
1. ಕಾರ್ಡ್‌ಧಾರಕರ ನಿರ್ಲಕ್ಷ್ಯ/ತಪ್ಪು ಅಥವಾ ದುರ್ನಡತೆ
2. ಡೆಬಿಟ್ ಕಾರ್ಡ್ ನೀಡಿಕೆ ಮತ್ತು ಖಾತೆಯ ನಿರ್ವಹಣೆಗಾಗಿ ನಿಯಮ ಮತ್ತು ಷರತ್ತುಗಳ ಉಲ್ಲಂಘನೆ.
3. ಕಾರ್ಡ್‌ನ ಅನುಚಿತ ಅಥವಾ ಅನಧಿಕೃತ ಬಳಕೆ ಅಥವಾ ನಿರ್ವಹಣೆ.

### ಮಾಹಿತಿ ಬಹಿರಂಗಪಡಿಸುವಿಕೆ:

1. ಕರ್ಣಾಟಕ ಬ್ಯಾಂಕ್ ಅಗತ್ಯವೆಂದು ಭಾವಿಸುವ ಯಾವುದೇ ವಿಷಯಕ್ಕೆ ಸಂಬಂಧಿಸಿದ ಯಾವುದೇ ಮಾಹಿತಿ, ದಾಖಲೆಗಳು ಅಥವಾ ಪ್ರಮಾಣಪತ್ರಗಳನ್ನು ಬ್ಯಾಂಕ್ ವಿನಂತಿಸಿದಾಗ ನೀವು

ಒದಗಿಸಬೇಕು. ಯಾವುದೇ ವಿಧಾನದಿಂದಾಗಲಿ ಅಥವಾ ಯಾವುದೇ ಮೂಲದಿಂದಾಗಲಿ, ಅಗತ್ಯವೆಂದು ಪರಿಗಣಿಸಲ್ಪಟ್ಟ ಮಾಹಿತಿಯ ನಿಖರತೆಯನ್ನು ಪರಿಶೀಲಿಸಲು ನೀವು ಬ್ಯಾಂಕ್‌ಗೆ ಅಧಿಕಾರ ನೀಡುತ್ತೀರಿ. ಮಾಹಿತಿಯನ್ನು ಒದಗಿಸದಿದ್ದರೆ ಅಥವಾ ಅದು ತಪ್ಪಾಗಿದೆ ಎಂದು ಕಂಡುಬಂದಲ್ಲಿ, ಬ್ಯಾಂಕ್ ತನ್ನ ವಿವೇಚನೆಯಿಂದ, ಕಾರ್ಡ್‌ನ ನವೀಕರಣವನ್ನು ನಿರಾಕರಿಸಬಹುದು ಅಥವಾ ಕಾರ್ಡ್ ಅನ್ನು ತಕ್ಷಣವೇ ರದ್ದುಗೊಳಿಸಬಹುದು.

2. ಸಮರ್ಥ ನ್ಯಾಯವ್ಯಾಪ್ತಿಯ ಯಾವುದೇ ನ್ಯಾಯಾಲಯ, ಅರೆ–ನ್ಯಾಯಾಂಗ ಸಂಸ್ಥೆ, ಕಾನೂನು ಜಾರಿಗೊಳಿಸುವ ಸಂಸ್ಥೆಗಳು ಮತ್ತು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಯಾವುದೇ ವಿಭಾಗದಲ್ಲಿ ಗ್ರಾಹಕರ ಮಾಹಿತಿಯನ್ನು ಬಹಿರಂಗಪಡಿಸುವ ಹಕ್ಕನ್ನು ಬ್ಯಾಂಕ್ ಹೊಂದಿದೆ.
3. ಯಾವುದೇ ಎಲೆಕ್ಟ್ರಾನಿಕ್ ನಗದು ವರ್ಗಾವಣೆಯ ನೆಟ್‌ವರ್ಕ್‌ನಲ್ಲಿ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಕಾರ್ಡ್‌ಧಾರಕರ ಖಾತೆಗೆ ಸಂಬಂಧಿಸಿದ ಅಗತ್ಯ ಅಥವಾ ಸೂಕ್ತವಾದ ಮಾಹಿತಿಯನ್ನು ಇತರ ಸಂಸ್ಥೆಗಳಿಗೆ ಕಟ್ಟುನಿಟ್ಟಾದ ವಿಶ್ವಾಸದಿಂದ ಬಹಿರಂಗಪಡಿಸುವ ಹಕ್ಕನ್ನು ಬ್ಯಾಂಕ್ ಹೊಂದಿದೆ.
4. ಮೂಲ ಪ್ರಯಾಣದ ಕೋಟಾ/ಇತರ ಅನುಮತಿಸುವ ಅರ್ಹತೆಗಳನ್ನು ಕಾರ್ಡ್‌ಧಾರಕರು ಮೀರಿಲ್ಲ ಮತ್ತು ಫೆಮಾ 1999 ಅನ್ನು ಉಲ್ಲಂಘಿಸಿಲ್ಲ ಎಂದು ಖಚಿತಪಡಿಸಿಕೊಳ್ಳಲು ಆರ್‌ಬಿಐಗೆ ಕಾರ್ಡ್‌ಧಾರಕರು ವಿದೇಶಿ ಕರೆನ್ಸಿಗಳಲ್ಲಿ ಕೈಗೊಂಡ ಖರ್ಚು ವೆಚ್ಚಗಳ ವರದಿಯನ್ನು ನೀಡುವ ಹಕ್ಕನ್ನು ಬ್ಯಾಂಕ್ ಹೊಂದಿದೆ.

## ಸಾಮಾನ್ಯ

1. ಕಾರ್ಡ್‌ಧಾರಕರು ತನ್ನ ಉದ್ಯೋಗ ಮತ್ತು/ಅಥವಾ ಕಚೇರಿ ಅಥವಾ ವಸತಿ ವಿಳಾಸ ಮತ್ತು ದೂರವಾಣಿ ಸಂಖ್ಯೆಗಳಲ್ಲಿನ ಯಾವುದೇ ಬದಲಾವಣೆಯ ಬಗ್ಗೆ ಲಿಖಿತವಾಗಿ ಬ್ಯಾಂಕ್‌ಗೆ ತಿಳಿಸಬೇಕು.
2. ಯಾವುದೇ ನಿಯಮ ಮತ್ತು ಷರತ್ತುಗಳು, ನೀತಿಗಳು, ವೈಶಿಷ್ಟ್ಯ ಮತ್ತು ಪ್ರಯೋಜನಗಳನ್ನು ಸೇರಿಸುವ ಅಥವಾ ಅಳಿಸುವ ಅಥವಾ ಬದಲಿಸುವ ಹಕ್ಕನ್ನು ಬ್ಯಾಂಕ್ ಹೊಂದಿದೆ. ಇಂಥ ಬದಲಾವಣೆಗಳ ಪ್ರಕಟಣೆಯು ಅದರ ಕಾರ್ಡ್‌ಧಾರಕರಿಗೆ ನೀಡುವ ಸೂಕ್ತ ಸೂಚನೆ ಎಂದು ಬ್ಯಾಂಕ್ ಪರಿಗಣಿಸುತ್ತದೆ. ಈ ಬದಲಾವಣೆಗಳು ಜಾರಿಗೆ ಬಂದ ದಿನಾಂಕದ ನಂತರ ಕಾರ್ಡ್‌ನ ಬಳಕೆಯನ್ನು, ಅಂತಹ ಬದಲಾವಣೆಗಳನ್ನು ಯಾವ ಸಂದೇಹವೂ ಇಲ್ಲದೆ ಕಾರ್ಡ್‌ಧಾರಕರು ಸ್ವೀಕರಿಸುವುದಕ್ಕೆ ಪುರಾವೆಯಾಗಿ ಪರಿಗಣಿಸಲಾಗುತ್ತದೆ.
3. ಕಾರ್ಡ್‌ಧಾರಕರು ಕೊನೆಯ ಬಾರಿಗೆ ಲಿಖಿತವಾಗಿ ಬ್ಯಾಂಕ್‌ಗೆ ನೀಡಿದ ವಿಳಾಸಕ್ಕೆ ಅಂಚೆಯ ಮೂಲಕ ಕಳುಹಿಸಿದ ಯಾವುದೇ ಸಂವಹನವನ್ನು ಕಳುಹಿಸಿದ 7 ದಿನಗಳಲ್ಲಿ ಕಾರ್ಡ್‌ಧಾರಕರಿಂದ ಸ್ವೀಕರಿಸಲ್ಪಟ್ಟಿದೆ ಎಂದು ಪರಿಗಣಿಸಲಾಗುತ್ತದೆ.
4. ಖಾತೆಯನ್ನು ಹೊಂದಿರುವವರು, ಕಾರ್ಡ್ ಬಳಸುವ ಮೂಲಕ, ಲಭ್ಯವಿರುವ ಮೊತ್ತಕ್ಕಿಂತ ಹೆಚ್ಚು ಮೊತ್ತವನ್ನು ಹಿಂಪಡೆದರೆ ಅಥವಾ ಬ್ಯಾಂಕ್ ಓವರ್‌ಡ್ರಾಫ್ಟ್ ಮಿತಿಯನ್ನು ಅನುಮತಿಸಿದ್ದರೆ ಬಡ್ಡಿಯೊಂದಿಗೆ, ಓವರ್‌ಡ್ರಾ ಮಾಡಿದ ಸಂಪೂರ್ಣ ಮೊತ್ತವನ್ನೂ, ಬ್ಯಾಂಕ್ ನಿರ್ಧರಿಸಿದ ದರದಲ್ಲಿ ಶುಲ್ಕವನ್ನೂ, ಖಾತೆದಾರರು ಬ್ಯಾಂಕಿಗೆ ಪಾವತಿಸಬೇಕು ಆದಾಗ್ಯೂ, ಯಾವುದೇ ಓವರ್‌ಡ್ರಾಫ್ಟ್ ಸೌಲಭ್ಯವನ್ನು ನೀಡಲು ಬ್ಯಾಂಕ್ ಬದ್ಧವಾಗಿದೆ ಎಂಬ ಒಪ್ಪಂದದಂತೆ ಅಥವಾ ಆ ಅರ್ಥವನ್ನು ಸೂಚಿಸುತ್ತದೆ ಎಂದು ತಿಳಿಯಬಾರದು.
5. ಕಾರ್ಡ್‌ಧಾರಕರಿಗೆ ರಿಯಾಯಿತಿಯಂತಹ ಅನ್ಯ ವ್ಯಕ್ತಿ ಅಥವಾ ಸಂಸ್ಥೆ ನೀಡುವ ಸರಕುಗಳ ಗುಣಮಟ್ಟ ಮತ್ತು ಸೇವೆಗಳ ಬಗ್ಗೆ ಬ್ಯಾಂಕ್ ಯಾವುದೇ ವಿವರಣೆಯನ್ನು ನೀಡುವುದಿಲ್ಲ. ಈ ಬಗೆಯ ಸೇವೆಯಲ್ಲಿ ಯಾವುದೇ ರೀತಿಯ ಕೊರತೆಯಿದ್ದರೆ ಅಥವಾ ಅದು ಅತೃಪ್ತಿಕರವಾಗಿದ್ದರೆ ಬ್ಯಾಂಕ್ ಜವಾಬ್ದಾರರಾಗಿರುವುದಿಲ್ಲ.
6. ಎಲ್ಲಾ ವಹಿವಾಟುಗಳು, ವಿಶೇಷವಾಗಿ ಠೇವಣಿಗಳು, ಅದಕ್ಕೆ ತಗಲುವ ಅವಧಿಯ ಕಾರಣದಿಂದಾಗಿ ವಿಳಂಬಕ್ಕೆ ಒಳಗಾಗುತ್ತವೆ. ಅಂತಹ ವಿಳಂಬದಿಂದಾಗಿ ಕಾರ್ಡ್‌ಧಾರಕರಿಗೆ ಉಂಟಾಗುವ ಯಾವುದೇ ನಷ್ಟ ಅಥವಾ ಹಾನಿ ಅಥವಾ ಅನನುಕೂಲತೆಗೆ ಬ್ಯಾಂಕ್ ಜವಾಬ್ದಾರಿಯಾಗಿರುವುದಿಲ್ಲ.
7. ಬ್ಯಾಂಕಿನ ಕಡೆಯಿಂದ ವ್ಯಕ್ತಪಡಿಸಿದ ಅಥವಾ ಸೂಚಿಸುವ ಯಾವುದೇ ಹೊಣೆಗಾರಿಕೆಯಿಲ್ಲದೆ ಕಾರ್ಡ್‌ಧಾರಕರು ತಮ್ಮ ಸ್ವಇಚ್ಛೆಯಿಂದ ಈ ಸೌಲಭ್ಯವನ್ನು ಪಡೆದುಕೊಳ್ಳಬೇಕು ಮತ್ತು ಬ್ಯಾಂಕಿನ ವಿರುದ್ಧ ಯಾವುದೇ ಬೇಡಿಕೆಗಳನ್ನು ಇಡದಿರಲು ಒಪ್ಪಿಕೊಳ್ಳುತ್ತಾರೆ.
8. ಬ್ಯಾಂಕಿಗೆ ನೀಡಲಾದ ಎಲ್ಲಾ ಅಧಿಕೃತತೆಗಳು ಮತ್ತು ಅಧಿಕಾರವನ್ನು ಬದಲಾಯಿಸಲಾಗದು
9. ಯಾವುದೇ ವಿಷಯ ಅಥವಾ ಸನ್ನಿವೇಶದಲ್ಲಿ ಪ್ರತಿಕೂಲಕರವಾಗಿದ್ದರೆ ಮಾತ್ರ
   1) ಪುಲ್ಲಿಂಗವನ್ನು ಸೂಚಿಸುವ ಪದಗಳನ್ನು ಸ್ತ್ರೀಲಿಂಗಕ್ಕೂ ಬಳಸಲಾಗುತ್ತದೆ ಮತ್ತು
   2) ಏಕವಚನದಲ್ಲಿರುವ ಪದಗಳು ಬಹುವಚನಕ್ಕೂ ಹಾಗೆಯೇ ಬಹುವಚನದ ಪದಗಳು ಏಕ ವಚನ ಪದಗಳಿಗೆ ಬಳಕೆಯಾಗುತ್ತವೆ.

ಈ ಮನಿಪ್ಲಾಂಟ್™ ಡೆಬಿಟ್ ಕಾರ್ಡ್ ಅರ್ಜಿ ನಮೂನೆಯನ್ನು ನಾನು ಓದಿದ್ದೇನೆ ಮತ್ತು ಅದರ ನಿಯಮ ಮತ್ತು ಷರತ್ತುಗಳನ್ನು ಅರ್ಥಮಾಡಿಕೊಂಡಿದ್ದೇನೆ ಎಂದು ನಾನು ಈ ಮೂಲಕ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ ಮತ್ತು ಕರ್ಣಾಟಕ ಬ್ಯಾಂಕ್ ಮನಿಪ್ಲಾಂಟ್ ಡೆಬಿಟ್ ಕಾರ್ಡ್‌ಗೆ ಈ ಮೂಲಕ ಅರ್ಜಿ ಸಲ್ಲಿಸುತ್ತೇನೆ.

ದಿನಾಂಕ:........./......../............

ಸ್ಥಳ: ................................

| | | |
|---|---|---|
| | | |
| 1 ನೇ ಅರ್ಜಿದಾರರ ಸಹಿ | 2 ನೇ ಅರ್ಜಿದಾರರ ಸಹಿ | 3 ನೇ ಅರ್ಜಿದಾರರ ಸಹಿ |

## ಎಸ್‌ಎಂಎಸ್ ಎಚ್ಚರಿಕೆಗಳಿಗಾಗಿ ನಿಯಮ ಮತ್ತು ಷರತ್ತುಗಳು

1. ಒದಗಿಸಿದ ಮೊಬೈಲ್ ಸಂಖ್ಯೆಗೆ ಆಯ್ದ ಸಂದೇಶಗಳ ಎಚ್ಚರಿಕೆ/ಮಾಹಿತಿಯನ್ನು ಕಳುಹಿಸಲು ನಾನು ಬ್ಯಾಂಕಿಗೆ ಅಧಿಕಾರ ನೀಡುತ್ತೇನೆ
2. ಮೊಬೈಲ್ ಸೇವಾ ಪೂರೈಕೆದಾರ/ಎಎಸ್‌ಪಿಗೆ, ಅವರು ನನಗೆ ಸೇವೆಗಳನ್ನು ಒದಗಿಸಲು ಅನುಕೂಲವಾಗುವಂತೆ, ಬ್ಯಾಂಕ್ ತನ್ನ ಬಳಿ ಇರುವ ಎಲ್ಲಾ ಬಳಕೆದಾರರ ಮಾಹಿತಿಯನ್ನು ಬಹಿರಂಗಪಡಿಸಲು ನಾನು ಸ್ಪಷ್ಟವಾಗಿ ಅಧಿಕಾರ ನೀಡುತ್ತೇನೆ.
3. ನಾನು ಎಲ್ಲಾ ಸಮಯದಲ್ಲೂ ಸಿಮ್ ಕಾರ್ಡ್ ಮತ್ತು ಮೊಬೈಲ್ ಫೋನನ್ನು ನನ್ನ ಬಳಿಯೇ ಇಟ್ಟುಕೊಂಡಿರುತ್ತೇನೆ. ಇದನ್ನು ಅನುಸರಿಸಲು ನಾನು ವಿಫಲವಾದರೆ, ಅದರ ಪರಿಣಾಮಗಳಿಗೆ ನಾನು ಸಂಪೂರ್ಣ ಜವಾಬ್ದಾರನಾಗಿರುತ್ತೇನೆ.
4. ನನ್ನ ಮಾಹಿತಿಯನ್ನು ಗೌಪ್ಯವಾಗಿರಿಸಲು ಬ್ಯಾಂಕ್ ಎಲ್ಲಾ ಸಮಂಜಸವಾದ ಪ್ರಯತ್ನಗಳನ್ನು ಮಾಡುತ್ತದೆ. ಆದಾಗ್ಯೂ ಯಾವುದೇ, ಗೌಪ್ಯ ಮಾಹಿತಿಯ ಬಹಿರಂಗಪಡಿಸುವಿಕೆ ಅಥವಾ ಸೋರಿಕೆಗೆ ಬ್ಯಾಂಕ್ ಜವಾಬ್ದಾರನಾಗಿರುವುದಿಲ್ಲ
5. ನೋಂದಾಯಿತ ಮೊಬೈಲ್ ಸಂಖ್ಯೆಯಲ್ಲಿ ಸೇವೆಯನ್ನು ಮುಂದುವರಿಸದಿರಲು ನಾನು ಬಯಸಿದಾಗ, ಎಸ್‌ಎಂಎಸ್ ಎಚ್ಚರಿಕೆ ಸೌಲಭ್ಯದಿಂದ ನೋಂದಣಿಯನ್ನು ರದ್ದುಗೊಳಿಸುವುದು ನನ್ನ ಜವಾಬ್ದಾರಿಯಾಗಿದೆ.
6. ನಾನು ನಿರ್ದಿಷ್ಟ ಸೆಲ್ಯುಲಾರ್ ಸೇವಾ ಪೂರೈಕೆದಾರರ ಸೆಲ್ಯುಲಾರ್ ಸೇವಾ ವ್ಯಾಪ್ತಿಯಲ್ಲಿದ್ದರೆ ಅಥವಾ ಅಂತಹ ಸೆಲ್ಯುಲಾರ್ ಸೇವಾ ಪೂರೈಕೆದಾರರ ರೋಮಿಂಗ್ ನೆಟ್‌ವರ್ಕ್‌ನ ಭಾಗವಾಗಿರುವ ಅಂತಹ ಪ್ರದೇಶದೊಳಗೆ ಇದ್ದರೆ ಮಾತ್ರ ಎಚ್ಚರಿಕೆಗಳು ನನ್ನ ಮೊಬೈಲ್ ತಲುಪುತ್ತವೆ.
7. ಎಸ್‌ಎಂಎಸ್ ವಿತರಣೆಗಾಗಿ ಮೊಬೈಲ್ ಸೇವಾ ಪೂರೈಕೆದಾರರ ಮೇಲೆ ಅವಲಂಬಿತವಾಗಿರುವುದರಿಂದ ಯಾವುದೇ ಸಂದರ್ಭದಲ್ಲಿ ಎಚ್ಚರಿಕೆಗಳು ತಲುಪದಿದ್ದರೆ ಬ್ಯಾಂಕ್ ಜವಾಬ್ದಾರನಾಗಿರುವುದಿಲ್ಲ.
8. ಬ್ಯಾಂಕ್ ಈ ಸೌಲಭ್ಯವನ್ನು ಸಂಪೂರ್ಣ ಅಥವಾ ಭಾಗಶಃ ಯಾವುದೇ ಪೂರ್ವ ಸೂಚನೆ ಇಲ್ಲದೆ ಮಾರ್ಪಡಿಸಬಹುದು ಅಥವಾ ಹಿಂಪಡೆಯಬಹುದು.
9. ಯಾವುದೇ ಕಾರಣಗಳನ್ನು ನೀಡದೆ ಯಾವುದೇ ಎಸ್.ಎಂ.ಎಸ್. ಅರ್ಜಿಯನ್ನು ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಹೊಂದಿರುತ್ತದೆ.
10. ವಿವಿಧ ರೀತಿಯ ಎಚ್ಚರಿಕೆಗಳಿಗೆ ಇರುವ ವ್ಯವಹಾರದ ಮೊತ್ತದ ಮಿತಿ ಮತ್ತು ಇತರ ಮಾಪನಾಂಕಗಳು ಮತ್ತು ಎಚ್ಚರಿಕೆಗಳನ್ನು ಕಳುಹಿಸುವ ಸಮಯವನ್ನು ಬ್ಯಾಂಕ್ ನಿರ್ಧರಿಸುತ್ತದೆ ಮತ್ತು ಇದನ್ನು ನಿರ್ಧರಿಸುವಲ್ಲಿ ಏಕೈಕ ಅಧಿಕಾರವನ್ನು ಹೊಂದಿರುತ್ತದೆ
11. ಕಾಲಕಾಲಕ್ಕೆ ಬ್ಯಾಂಕ್ ತನ್ನ ವಿವೇಚನೆಯಿಂದ ಎಸ್‌ಎಂಎಸ್ ಎಚ್ಚರಿಕೆ ಸೌಲಭ್ಯವನ್ನು ಬಳಸುವ ಶುಲ್ಕವನ್ನು ನಿರ್ದಿಷ್ಟಪಡಿಸಬಹುದು.
12. ಅಸ್ತಿತ್ವದಲ್ಲಿರುವ ಯಾವುದೇ ನಿಬಂಧನೆಗಳು ಅಥವಾ ಷರತ್ತುಗಳನ್ನು ಮಾರ್ಪಡಿಸುವ ಮೂಲಕ ಅಥವಾ ರದ್ದುಗೊಳಿಸುವ ಮೂಲಕ ಅಥವಾ ಯಾವುದೇ ಹೊಸ ನಿಬಂಧನೆ ಅಥವಾ ಷರತ್ತುಗಳನ್ನು ಸೇರಿಸುವ ಮೂಲಕ, ವೆಬ್‌ಸೈಟ್‌ನಲ್ಲಿ ಅಂತಹ ತಿದ್ದುಪಡಿಯ ಪ್ರಕಟಣೆಯನ್ನು ಸ್ಪಷ್ಟವಾಗಿ ಪ್ರಕಟಿಸುವ ಮೂಲಕ ಅಥವಾ ಬಳಕೆದಾರರಿಗೆ ಲಿಖಿತವಾಗಿ ಸೂಚನೆ ಒದಗಿಸುವ ಮೂಲಕ ನಿಯಮಗಳನ್ನು ತಿದ್ದುಪಡಿ ಮಾಡುವ ಅಥವಾ ಅದಕ್ಕೆ ಪರಿಶಿಷ್ಟಗಳನ್ನು ಸೇರಿಸುವ ಸಂಪೂರ್ಣ ಅಧಿಕಾರವನ್ನು ಬ್ಯಾಂಕ್ ಹೊಂದಿದೆ. ಅಂತಹ ಮಾರ್ಪಾಟಿನ ನಂತರ ಎಸ್‌ಎಂಎಸ್ ಎಚ್ಚರಿಕೆ ಸೇವೆಗಳ ಮುಂದುವರಿದ ಬಳಕೆಯು ಅಂತಹ ತಿದ್ದುಪಡಿಯನ್ನು ಅಂಗೀಕರಿಸಿರುವುದರ ಮತ್ತು ಸ್ವೀಕರಿಸುವುದರ ಸೂಚನೆಯಾಗಿದೆ.

ದಿನಾಂಕ:........./......../............

ಸ್ಥಳ: ................................

| | | |
|---|---|---|
| | | |
| 1 ನೇ ಅರ್ಜಿದಾರರ ಸಹಿ | 2 ನೇ ಅರ್ಜಿದಾರರ ಸಹಿ | 3 ನೇ ಅರ್ಜಿದಾರರ ಸಹಿ |

# ಮೊಬೈಲ್ ಬ್ಯಾಂಕಿಂಗ್ ಸೇವೆಗಾಗಿ ನಿಯಮ ಮತ್ತು ಷರತ್ತುಗಳು

ತನ್ನ ನೋಂದಾಯಿತ ಮತ್ತು ಮುಖ್ಯ ಕಚೇರಿಯನ್ನು ಮಂಗಳೂರು – 575 002 ಇಲ್ಲಿ ಹೊಂದಿರುವ ಕರ್ಣಾಟಕ ಬ್ಯಾಂಕ್ ಲಿಮಿಟೆಡ್ ಈ ಕೆಳಗಿನ ನಿಯಮ ಮತ್ತು ಷರತ್ತುಗಳ ಮೇಲೆ ಮೊಬೈಲ್ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುತ್ತದೆ. ಮೊಬೈಲ್ ಬ್ಯಾಂಕಿಂಗ್ ಸೇವೆಗಳನ್ನು ಬಳಸುವ ಮೊದಲು ದಯವಿಟ್ಟು ಈ ಮೊಬೈಲ್ ಬ್ಯಾಂಕಿಂಗ್ ನಿಯಮ ಮತ್ತು ಷರತ್ತುಗಳನ್ನು ಎಚ್ಚರಿಕೆಯಿಂದ ಓದಿ. ಮೊಬೈಲ್ ಬ್ಯಾಂಕಿಂಗ್ ಸೇವೆ ಮೂಲಕ ಮಾಡುವ ಎಲ್ಲಾ ವಹಿವಾಟುಗಳಿಗೆ ಈ ನಿಯಮ ಮತ್ತು ಷರತ್ತುಗಳು ಅನ್ವಯಿಸುತ್ತವೆ. ಮೊಬೈಲ್ ಬ್ಯಾಂಕಿಂಗ್ ಸೇವೆಗಳನ್ನು ಬಳಸುವ ಮೂಲಕ, ಖಾತೆದಾರನು ಇಲ್ಲಿ ಪಟ್ಟಿ ಮಾಡಲಾದ ಎಲ್ಲಾ ನಿಯಮ ಮತ್ತು ಷರತ್ತುಗಳನ್ನು ಬೇಷರತ್ತಾಗಿ ಸ್ವೀಕರಿಸುತ್ತಾರೆ ಮತ್ತು ಅವುಗಳಿಗೆ ಬದ್ಧರಾಗಿರುತ್ತಾರೆ ಮತ್ತು ಸಂಬಂಧಿತ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ನಿಬಂಧನೆಗಳು, ಮತ್ತು ಕಾಲಕಾಲಕ್ಕೆ ತಿದ್ದುಪಡಿ ಮಾಡಿದ/ಮಾರ್ಪಡಿಸಿದ/ ಮತ್ತು ಕಾಲಕಾಲಕ್ಕೆ ಜಾರಿಯಲ್ಲಿರುವ ಯಾವುದೇ ಅನುಗುಣವಾದ ಕಾಯಿದೆಯಡಿಯಲ್ಲಿ ರೂಪಿಸಲಾದ ಎಲ್ಲಾ ನಿಯಮ ಮತ್ತು ನಿಬಂಧನೆಗಳಿಗೆ ಅರ್ಜಿದಾರನು ಬದ್ಧರಾಗಿರಲು ಒಪ್ಪುತ್ತಾನೆ. ಮೊಬೈಲ್ ಬ್ಯಾಂಕಿಂಗ್ ಸೇವೆಗಳ ಗ್ರಾಹಕನು ತನ್ನ ಉಳಿತಾಯ ಬ್ಯಾಂಕ್ ಖಾತೆ/ಚಾಲ್ತಿ ಖಾತೆಗಳು/ಬ್ಯಾಂಕಿನ ಇತರ ಖಾತೆಗಳ ವ್ಯವಹಾರಕ್ಕೆ ಸಂಬಂಧ ಪಟ್ಟ ನಿಯಮ ಮತ್ತು ಷರತ್ತುಗಳಿಗೆ ಮತ್ತು ಕಾಲಕಾಲಕ್ಕೆ ಮಾಡಿದ ಬದಲಾವಣೆಗಳಿಗೆ ಬದ್ಧನಾಗಿರುತ್ತಾನೆ. ಕಾಲಕಾಲಕ್ಕೆ ತಿದ್ದುಪಡಿ ಮಾಡಿದ ಬ್ಯಾಂಕಿನ ನಿಯಮ ಮತ್ತು ನಿಬಂಧನೆಗಳಿಗೆ ಸಹಾ ಬದ್ಧನಾಗಿರುತ್ತಾನೆ.

## 1. ವ್ಯಾಖ್ಯಾನಗಳು: ಈ ಕೆಳಗಿನ ಪದಗಳು ಮತ್ತು ಅಭಿವ್ಯಕ್ತಿಗಳು ಸೂಕ್ತವಾದಲ್ಲೆಲ್ಲಾ ಅನುಗುಣವಾದ ಅರ್ಥಗಳನ್ನು ಹೊಂದಿರುತ್ತವೆ

1.1 'ಖಾತೆ' ಎಂದರೆ, ಮೊಬೈಲ್ ಬ್ಯಾಂಕಿಂಗ್ ಸೇವೆಯನ್ನು ನೋಂದಾಯಿಸುವ ಅಥವಾ ಮರು ನೋಂದಾಯಿಸುವ ವಿನಂತಿಯನ್ನು ಸಲ್ಲಿಸುವ ಮೂಲ ಶಾಖೆಯಲ್ಲಿನ ಖಾತೆ.

1.2 'ಗ್ರಾಹಕ' ಎಂದರೆ ಕೆಬಿಎಲ್‌ನೊಂದಿಗೆ ಖಾತೆಯನ್ನು ಹೊಂದಿರುವವರು

1.3 'ಎಂಪಿಐಎನ್' ಎಂದರೆ ಮೊಬೈಲ್ ಬ್ಯಾಂಕಿಂಗ್ ಸೇವೆಗಾಗಿ ಮೊಬೈಲ್ ವೈಯಕ್ತಿಕ ಗುರುತಿನ ಸಂಖ್ಯೆ (ಪಾಸ್ವರ್ಡ್)

1.4 'ಎಂಬಿಎಸ್' ಎಂದರೆ ಬ್ಯಾಂಕಿನ ಮೊಬೈಲ್ ಬ್ಯಾಂಕಿಂಗ್ ಸೇವೆ ಮತ್ತು ಅಪ್ಲಿಕೇಶನ್/ಯುಎಸ್‌ಎಸ್‌ಡಿ/ಜಿಪಿಆರ್ ಎಸ್/ಎಸ್‌ಎಂಎಸ್ ಬ್ಯಾಂಕಿಂಗ್‌ನ ಸೇವೆಯನ್ನು ಒಳಗೊಂಡಿದೆ

1.5 'ಯುಎಸ್‌ಎಸ್‌ಡಿ' ಎಂದರೆ 'ಅನ್‌ಸ್ಟ್ರಕ್ಚರ್ಡ್ ಸಪ್ಲಿಮೆಂಟರಿ ಸರ್ವೀಸ್ ಡೇಟಾ'

1.6 'ಬ್ಯಾಂಕ್' ಎಂದರೆ ಕರ್ಣಾಟಕ ಬ್ಯಾಂಕ್ ಲಿಮಿಟೆಡ್ ಅಥವಾ ಅದರ ಯಾವುದೇ ಉತ್ತರಾಧಿಕಾರಿ ಮತ್ತು ನಿಯೋಜಕರು

1.7 'ಸೌಲಭ್ಯ' ಎಂದರೆ ಷರತ್ತು 11 ರಲ್ಲಿರುವ ಐಎಂಪಿಎಸ್ ಸೇರಿದಂತೆ ಗ್ರಾಹಕರಿಗೆ ಒದಗಿಸಿದ ಮೊಬೈಲ್ ಬ್ಯಾಂಕಿಂಗ್ ಸೇವೆಗಳು.

1.8 'ಮೊಬೈಲ್ ಫೋನ್ ಸಂಖ್ಯೆ' ಎಂದರೆ ಗ್ರಾಹಕರು ಸೌಲಭ್ಯಕ್ಕಾಗಿ ನೋಂದಾಯಿಸಲು ಬಳಸಿದ ಮೊಬೈಲ್ ಸಂಖ್ಯೆ

1.9 'ಅಪ್ಲಿಕೇಶನ್' ಎಂದರೆ ಗ್ರಾಹಕರ ಮೊಬೈಲ್ ಫೋನ್ ಹ್ಯಾಂಡ್‌ಸೆಟ್‌ಗೆ ಡೌನ್ಲೋಡ್ ಮಾಡಲಾಗುವ ಬ್ಯಾಂಕಿನ ಮೊಬೈಲ್ ಬ್ಯಾಂಕಿಂಗ್ ಅಪ್ಲಿಕೇಶನ್.

1.10 'ಜಿಪಿಆರ್‌ಎಸ್' ಎಂದರೆ ಜನರಲ್ ಪ್ಯಾಕೆಟ್ ರೇಡಿಯೋ ಸೇವೆ

1.11 'ಬ್ಯಾಂಕಿನ ವೆಬ್‌ಸೈಟ್ ಎಂದರೆ www.karnatakabank.com

1.12 'ಎಸ್‌ಎಂಎಸ್ ಬ್ಯಾಂಕಿಂಗ್' ಎಂದರೆ ಗ್ರಾಹಕರಿಗೆ ಎಸ್‌ಎಂಎಸ್ ಸಂದೇಶ ಮೊಬೈಲ್ ಫೋನನ್ನು ಉಪಯೋಗಿಸಿ ತಮ್ಮ ಖಾತೆ ಮಾಹಿತಿಯನ್ನು ಬಳಸಿಕೊಳ್ಳಲು ಅನುಮತಿಸುವ ಸೇವೆಯಾಗಿದೆ. (ಷರತ್ತು 12 ರಲ್ಲಿ ಹೆಚ್ಚಿನ ಮಾಹಿತಿ)

1.13 'ಮೊಬೈಲ್ ಫೋನ್' ಎಂದರೆ ಅರ್ಜಿದಾರ/ಖಾತೆದಾರರ ಹೆಸರಿನಲ್ಲಿರುವ ಹ್ಯಾಂಡ್‌ಸೆಟ್ ಮತ್ತು ಸಿಮ್ ಕಾರ್ಡ್ ಜೊತೆಗೆ ಬಿಡಿಭಾಗಗಳು ಹಾಗೂ ಜಿಎಸ್‌ಎಂ ಮತ್ತು ಸಿಡಿಎಂಎಗೆ ಅಗತ್ಯವಾದ ಸಾಫ್ಟ್‌ವೇರ್.

## 2. ನಿಯಮ ಮತ್ತು ಷರತ್ತುಗಳ ಅನ್ವಯಿಸುವಿಕೆ

ಮೊಬೈಲ್ ಬ್ಯಾಂಕಿಂಗ್ ಸೇವೆಗಾಗಿ ಇರುವ ನಿಯಮ ಮತ್ತು ಷರತ್ತುಗಳನ್ನು ಅರ್ಥಮಾಡಿಕೊಳ್ಳದೆ ಮತ್ತು ಒಪ್ಪಿಕೊಳ್ಳದೆ ಎಂಬಿಎಸ್ ಅನ್ನು ಬಳಸಲು ಯಾವುದೇ ಗ್ರಾಹಕರಿಗೆ ಅರ್ಹತೆ ಇಲ್ಲ. ಎಂಬಿಎಸ್ ಅನ್ನು ಬಳಸುವ ಮೂಲಕ, ಗ್ರಾಹಕರು ಈ ನಿಯಮ ಮತ್ತು ಷರತ್ತುಗಳನ್ನು ಒಪ್ಪುತ್ತಾರೆ ಮತ್ತು ಅಂಗೀಕರಿಸುತ್ತಾರೆ. ಇದೇ ಗ್ರಾಹಕ ಮತ್ತು ಬ್ಯಾಂಕ್ ನಡುವಿನ ಒಪ್ಪಂದವಾಗುತ್ತದೆ. ಕಾಲಕಾಲಕ್ಕೆ ಬ್ಯಾಂಕ್ ತಿದ್ದುಪಡಿ ಮಾಡಿದಂತಹ ನಿಯಮ ಮತ್ತು ಷರತ್ತುಗಳಿಂದ ಎಂಬಿಎಸ್ ಅನ್ನು ನಿಯಂತ್ರಿಸಲಾಗುತ್ತದೆ. ಈ ನಿಯಮ ಮತ್ತು ಷರತುಗಳು ಹೆಚ್ಚುವರಿಯಾಗಿರುತ್ತವೆ ಮತ್ತು ಗ್ರಾಹಕರ ಯಾವುದೇ ಖಾತೆಗಳಿಗೆ ಸಂಬಂಧಿಸಿದ ಮತ್ತು/ಅಥವಾ ಬ್ಯಾಂಕ್ ಒದಗಿಸುವ ಯಾವುದೇ ಸೇವೆಗೆ ಸಂಬಂಧಿಸಿದ ಇತರ ನಿಯಮ ಮತ್ತು ಷರತ್ತುಗಳ ಅನಾದರವಲ್ಲ.

## 3. ಮೊಬೈಲ್ ಬ್ಯಾಂಕಿಂಗ್ ಸೇವೆಯನ್ನು ನಿಯಂತ್ರಿಸುವ ಸಾಮಾನ್ಯ ವ್ಯವಹಾರ ನಿಯಮಗಳು

ಕೆಳಗಿನ ವ್ಯವಹಾರ ನಿಯಮ ಎಂಬಿಎಸ್‌ಗೆ ಅನ್ವಯವಾಗುತ್ತವೆ

3.1 ಬ್ಯಾಂಕಿನಲ್ಲಿ ಉಳಿತಾಯ/ಚಾಲ್ತಿ ಖಾತೆ ಹೊಂದಿರುವ ಗ್ರಾಹಕರಿಗೆ ಈ ಸೌಲಭ್ಯ ಲಭ್ಯವಿರುತ್ತದೆ.

3.2 ಅಪ್ಲಿಕೇಶನ್/ಜಿಪಿಆರ್‌ಎಸ್ ಅನ್ನು ಉಪಯೋಗಿಸಿ ಸೇವೆಯನ್ನು ಬಳಸಿದಾಗ ನಿಧಿಯ ವರ್ಗಾವಣೆ, ಬಿಲ್ ಪಾವತಿ ಮತ್ತು ವ್ಯಾಪಾರಿ ಪಾವತಿಯ ಒಟ್ಟು ಮೊತ್ತಕ್ಕೆ ಪ್ರತಿ ಗ್ರಾಹಕರಿಗೆ ಸೌಲಭ್ಯದ ಅಡಿಯಲ್ಲಿ ದೈನಂದಿನ ಮಿತಿ ರೂ 2,00,000.00 ಆಗಿರಬೇಕು.

3.3 ತಪ್ಪಾದ ಎಂ ಪಿನ್ ಅನ್ನು ಮೂರು ಬಾರಿ ನಮೂದಿಸುವುದರಿಂದ ಆ ದಿನಕ್ಕೆ ಖಾತೆಯ ಎಂಬಿಎಸ್ ಸೌಲಭ್ಯ ನಿರ್ಬಂಧಗೊಳ್ಳುತ್ತದೆ ಮತ್ತು ಅಂತಹ ಎರಡು ಸತತ ನಿರ್ಬಂಧಗಳು ಸೌಲಭ್ಯವನ್ನು ನಿಷ್ಕ್ರಿಯಗೊಳಿಸುತವೆ ಮತ್ತ ಗ್ರಾಹಕನು ಸೇವೆಗಳಿಗಾಗಿ ಮರು–ನೋಂದಾಯಿಸಿಕೊಳ್ಳಬೇಕು.

3.4 ವ್ಯವಹಾರ ನಿಯಮಗಳಲ್ಲಿನ ಯಾವುದೇ ಬದಲಾವಣೆಯನ್ನು ಬ್ಯಾಂಕಿನ ವೆಬ್‌ಸೈಟ್ www.karnatakabank.comನಲ್ಲಿ ಪ್ರಕಟಿಸಲಾಗುವುದು, ಇದೇ ಗ್ರಾಹಕರಿಗೆ ತಕ್ಕ ಸೂಚನೆ ಎಂದು ಪರಿಗಣಿಸಲಾಗುತ್ತದೆ.

3.5 ಜಂಟಿ ಖಾತೆಯ ಸಂದರ್ಭದಲ್ಲಿ ಖಾತಾ ನಿರ್ವಾಹಣಾ ವಿಧಾನವು "ಇಬ್ಬರಲ್ಲಿ ಒಬ್ಬರು ಅಥವಾ ಜೀವಿತ ಇರುವವರು" ಆಗಿದ್ದರೆ ಯಾವುದೇ ಜಂಟಿ ಖಾತೆದಾರರು ಸೌಲಭ್ಯವನ್ನು ಬಳಸಬಹುದು. ಅಂತಹ ಖಾತೆಗಳಲ್ಲಿನ ವಹಿವಾಟುಗಳಿಗೆ ಎಲ್ಲಾ ಜಂಟಿ ಖಾತೆದಾರರೂ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಬದ್ಧರಾಗಿರುತ್ತಾರೆ. ಖಾತೆಯ ನಿರ್ವಾಹಣಾ ವಿಧಾನದಲ್ಲಿನ ಯಾವುದೇ ಬದಲಾವಣೆಯ ಬಗ್ಗೆ ಗ್ರಾಹಕರು ಪ್ರತ್ಯೇಕವಾಗಿ ಬ್ಯಾಂಕಿಗೆ ಸಲಹೆ ನೀಡಲು ಮತ್ತು ಅಪ್ಲಿಕೇಶನ್‌ನಲ್ಲಿ ಅಗತ್ಯವಾದ ಮಾರ್ಪಾಡುಗಳನ್ನು ಕಾರ್ಯಗತಗೊಳಿಸಲು ಬದ್ಧರಾಗಿರುತ್ತಾರೆ . ಖಾತಾ ನಿರ್ವಾಹಣಾ ವಿಧಾನವು "ಜಂಟಿ" ಆಗಿರುವ ಖಾತೆಗಳು, ಅಪ್ರಾಪ್ತರ ಹೆಸರಿನಲ್ಲಿ ಅಥವಾ ಅಪ್ರಾಪ್ತರು ಜಂಟಿ ಖಾತಾದಾರರಾಗಿದ್ದರೆ ಎಂಬಿಎಸ್‌ಗೆ ಅರ್ಹರಲ್ಲ.

3.6 ಎಂಬಿಎಸ್‌ಗಾಗಿ ಗ್ರಾಹಕರ ವಿನಂತಿಯನ್ನು ಕಾರಣ ನೀಡದೆ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಹೊಂದಿದೆ

3.7 ಗ್ರಾಹಕರು ಮೂರು ತಿಂಗಳು ಅಥವಾ ಅದಕ್ಕಿಂತ ಹೆಚ್ಚಿನ ಕಾಲ ಸೌಲಭ್ಯವನ್ನು ಬಳಸಿಕೊಳ್ಳದಿದ್ದಲ್ಲಿ ಬ್ಯಾಂಕ್ ಆ ಸೌಲಭ್ಯವನ್ನು ಸ್ಥಗಿತಗೊಳಿಸಬಹುದು. ಆರು ತಿಂಗಳು ಅಥವಾ ಅದಕ್ಕಿಂತ ಹೆಚ್ಚಿನ ಕಾಲ ಸೌಲಭ್ಯವನ್ನು ಬಳಸದಿದ್ದಲ್ಲಿ, ಅದನ್ನು ರದ್ದುಗೊಳಿಸಲಾಗುತ್ತದೆ

3.8 "ಮೊಬೈಲ್ ಬ್ಯಾಂಕಿಂಗ್ ಸೇವೆಗಳನ್ನು ನಿಷ್ಕ್ರಿಯಗೊಳಿಸುವುದು" ಆಯ್ಕೆಯನ್ನು ಆರಿಸುವ ಮೂಲಕ ತನ್ನ ಪ್ರಾಥಮಿಕ ಖಾತೆಯಲ್ಲಿ ಎಂಬಿಎಸ್ ಅನ್ನು ಸಕ್ರಿಯಗೊಳಿಸಿರುವ ಮೂಲ ಶಾಖೆಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಿ ಗ್ರಾಹಕರು ಸೌಲಭ್ಯವನ್ನು ಮುಕ್ತಾಯಗೊಳಿಸಲು ವಿನಂತಿಸಬಹುದು. ಬ್ಯಾಂಕ್ ಅಂತಹ ಯಾವುದೇ ರದ್ದತಿ ವಿನಂತಿಯನ್ನು ದೃಢೀಕರಿಸುವ ಮೊದಲು ಮಾಡಿದ ನಿರ್ದಿಷ್ಟ ಖಾತೆಯಲ್ಲಿನ ಎಲ್ಲಾ ವಹಿವಾಟುಗಳಿಗೆ ಗ್ರಾಹಕರು ಜವಾಬ್ದಾರರಾಗಿರುತ್ತಾರೆ. ಸೌಲಭ್ಯವನ್ನು ಹಿಂತೆಗೆದುಕೊಳ್ಳುವ ಅಥವಾ ರದ್ದುಗೊಳಿಸುವ ಮುನ್ನ ಸಮಂಜಸವಾದ ಸೂಚನೆ ನೀಡುವುದು ಬ್ಯಾಂಕಿನ ಆದ್ಯತೆಯಾಗಿದೆ. ಆದರೆ ಸೌಲಭ್ಯವನ್ನು ಸಂಪೂರ್ಣವಾಗಿ ಅಥವಾ ಭಾಗಶಃ, ಯಾವುದೇ ಸಮಯದಲ್ಲಿ ಗ್ರಾಹಕರಿಗೆ ಯಾವುದೇ ಪೂರ್ವ ಸೂಚನೆ ನೀಡದೆ ತಾತ್ಕಲಿಕವಾಗಿ ಸ್ಥಗಿತಗೊಳಿಸುವುದು ಅಥವಾ ರದ್ದುಗೊಳಿಸುವುದು ಬ್ಯಾಂಕಿನ ವಿವೇಚನೆಗೆ ಬಿಟ್ಟಿದ್ದು. ಎಂಬಿಎಸ್‌ನ ಹಾರ್ಡ್‌ವೇರ್/ಸಾಫ್ಟ್‌ವೇರ್ ಸ್ಥಗಿತಗೊಂಡಾಗ, ಗ್ರಾಹಕರಿಗೆ ಯಾವುದೇ ಮುನ್ಸೂಚನೆಯಿಲ್ಲದೆ, ತುರ್ತು ಅಥವಾ ಭದ್ರತಾ ಕಾರಣಗಳಿಗಾಗಿ, ಯಾವುದೇ ನಿರ್ವಹಣೆ ಅಥವಾ ದುರಸ್ತಿ ಕೆಲಸಕ್ಕಾಗಿ ಈ ಸೌಲಭ್ಯವನ್ನು ತಾತ್ಕಾಲಿಕವಾಗಿ ಅಮಾನತುಗೊಳಿಸಬಹುದು ಮತ್ತು ತುರ್ತು ಅಥವಾ ಭದ್ರತೆಯ ಕಾರಣಗಳಿಗಾಗಿ ಅಂತಹ ಕ್ರಮ ತೆಗೆದುಕೊಳ್ಳಬೇಕಾದ ಸಂದರ್ಭದಲ್ಲಿ ಅದಕ್ಕೆ ಬ್ಯಾಂಕ್ ಜವಾಬ್ದಾರನಾಗಿರುವುದಿಲ್ಲ.

3.9 ಬ್ಯಾಂಕ್ ನಿಗದಿಪಡಿಸಿದ ನಿಯಮ ಮತ್ತು ಷರತ್ತುಗಳನ್ನು ಗ್ರಾಹಕರು ಉಲ್ಲಂಘಿಸಿದ್ದರೆ ಅಥವಾ ಗ್ರಾಹಕರು ಸಾವಿಗೀಡಾಗಿದ್ದು, ಅದು ಬ್ಯಾಂಕಿನ ಗಮನಕ್ಕೆ ಬಂದಾಗ, ಬ್ಯಾಂಕ್ ಮುನ್ಸೂಚನೆಯಿಲ್ಲದೆ ಸೌಲಭ್ಯದ ಅಡಿಯಲ್ಲಿ ಸೇವೆಗಳನ್ನು ನಿಷ್ಕ್ರಿಯಗೊಳ್ಳಿಸಬಹುದು ಅಥವಾ ಸ್ಥಗಿತಗೊಳಿಸಬಹುದು.

## 4. ಸೌಲಭ್ಯದ ಬಳಕೆ

ಸೌಲಭ್ಯಕ್ಕಾಗಿ ನೋಂದಾಯಿಸುವಾಗ ತಮ್ಮ ಮೊಬೈಲ್ ಫೋನ್‌ನಲ್ಲಿ ನೊಂದಣಿ ಮಾಡುವಾಗ ಗ್ರಾಹಕರು ನಿಯಮ ಮತ್ತು ಷರತುಗಳನ್ನು ಅಂಗೀಕರಿಸುವ ಮೂಲಕ,

4.1 ಕಾಲಕಾಲಕ್ಕೆ ಬ್ಯಾಂಕ್ ನೀಡುವ ಹಣಕಾಸು ಮತ್ತು ಹಣಕಾಸೇತರ ವ್ಯವಹಾರಗಳಿಗೆ ಎಂಬಿಎಸ್ ಅನ್ನು ಬಳಸಲು ಒಪ್ಪುತ್ತಾರೆ.

4.2 ಎಂ ಪಿನ್ ಬಳಸಿ ಕೈಗೊಂಡ ಎಲ್ಲಾ ವಹಿವಾಟು/ಸೇವೆಗಳಿಗೆ ಸಂಬಂಧಪಟ್ಟಂತೆ ಎಂಬಿಎಸ್ ಅನ್ನು ಸಕ್ರಿಯಗೊಳಿಸಲಾದ ಖಾತೆಗಳಿಂದ ಡೆಬಿಟ್ ಮಾಡಲು ಬ್ಯಾಂಕಿಗೆ ಸ್ಥಿರವಾಗಿ ಅಧಿಕಾರ ನೀಡುತ್ತಾರೆ.

4.3 ಬ್ಯಾಂಕ್ ನೀಡುವ ಎಂಬಿಎಸ್‌ನ ಸುಗಮ ಕಾರ್ಯಾಚರಣೆಗಾಗಿ ಖಾತೆ ಸಂಖ್ಯೆ, ಬಳಕೆದಾರರ ಐಡಿ ಮತ್ತು ಮೊಬೈಲ್ ಫೋನ್ ಸಂಖ್ಯೆಯನ್ನು ಮ್ಯಾಪಿಂಗ್ ಮಾಡಲು ಮತ್ತು ಮ್ಯಾಪಿಂಗ್ ದಾಖಲೆಯನ್ನು ತನ್ನ ಸರ್ವರ್ ಅಥವಾ ಯಾವುದೇ ಪ್ರತ್ಯೇಕ ಸಂಸ್ಥೆಯ ಸರ್ವರ್‌ನಲ್ಲೆ ಸಂರಕ್ಷಿಸಲು ಮತ್ತು ಅಂತಹ ಮಾಹಿತಿಯನ್ನು ಬ್ಯಾಂಕ್ ನೀಡಬಹುದಾದ ಬ್ಯಾಂಕಿಂಗ್ ಸೇವೆ/ತಂತ್ರಜ್ಞಾನ ಉತ್ಪನ್ನಗಳನ್ನು ಮತ್ತಷ್ಟು ವರ್ಧಿಸಲು ತನ್ನ ವಿವೇಚನೆಯಿಂದ ಬಳಸುವಂತೆ ಬ್ಯಾಂಕ್‌ಗೆ ಅಧಿಕಾರ ನೀಡುತ್ತಾರೆ.

4.4 ಬ್ಯಾಂಕ್ ನೀಡುವ ಎಂಬಿಎಸ್ ಸೌಲಭ್ಯವು ಬ್ಯಾಂಕ್ ನಿಗದಿಪಡಿಸಿದ ಮಿತಿಯೊಳಗೆ ಆತನಿಗೆ/ಆಕೆಗೆ ಎಂ ಪಿನ್ ಬಳಸಿ ವಹಿವಾಟು ನಡೆಸಲು ಅನುವು ಮಾಡಿಕೊಡುತ್ತದೆ ಎಂದು ಆತ/ಆಕೆ ತಿಳಿದಿರುತ್ತಾರೆ ಮತ್ತು ಅದನ್ನು ಅವರು ಒಪ್ಪಿಕೊಂಡಿರುತ್ತಾರೆ. ಇಂತಹ ವಹಿವಾಟನ್ನು ಪ್ರಾಮಾಣಿಕ ವಹಿವಾಟು ಎಂದು ಪರಿಗಣಿಸಲಾಗುತದೆ.

4.5 ಮೊಬೈಲ್ ಫೋನ್‌ಗಳನ್ನು ಬಳಸಿಕೊಂಡು ಮಾಡಿದ ವಹಿವಾಟುಗಳನ್ನು ಹಿಂತೆಗೆದುಕೊಳ್ಳಲಾಗುವುದಿಲ್ಲ ಎಂದು ಒಪ್ಪಿಕೊಳ್ಳುತ್ತಾರೆ ಏಕೆಂದರೆ ಇವುಗಳು ಕ್ಷಣಮಾತ್ರದಲ್ಲಿ/ ಆ ಕ್ಷಣದಲ್ಲೇ ಜರಗುವ ವಹಿವಾಟುಗಳಾಗಿರುತ್ತವೆ.

4.6 ಕಾಲಕಾಲಕ್ಕೆ ನಿಗದಿತ ಮಿತಿಗಳನ್ನು ಪರಿಷ್ಕರಿಸುವ ಸಂಪೂರ್ಣ ಮತ್ತು ಅನಿಯಂತ್ರಿತ ಹಕ್ಕನ್ನು ಬ್ಯಾಂಕ್ ಹೊಂದಿದೆ, ಆತ/ಆಕೆ ಅದಕ್ಕೆ ಬದ್ಧರಾಗಿರುತ್ತಾರೆ ಎಂದು ಅರ್ಥಮಾಡಿಕೊಳ್ಳುತ್ತಾರೆ ಮತ್ತು ಸ್ಪಷ್ಟವಾಗಿ ಒಪ್ಪುತ್ತಾರೆ.

4.7 ಆತನ/ಆಕೆಯ ಹೆಸರಿನಲ್ಲಿ ಮೊಬೈಲ್ ಸೇವಾ ಪೂರೈಕೆದಾರರಲ್ಲಿ ನೋಂದಾಯಿಸಲಾಗಿರುವ ಮೊಬೈಲ್ ಫೋನ್‌ನಲ್ಲಿ ಮಾತ್ರ ಸೌಲಭ್ಯವನ್ನು ಸರಿಯಾಗಿ ಮತ್ತು ಮಾನ್ಯವಾಗಿ ಬಳಸಲು ಮತ್ತು ಸೌಲಭ್ಯಕ್ಕಾಗಿ ಬ್ಯಾಂಕಿನಲ್ಲಿ ನೊಂದಾಯಿಸಿದ ಮೊಬೈಲ್ ಫೋನ್ ಸಂಖ್ಯೆಯ ಮೂಲಕ ಮಾತ್ರ ಸೌಲಭ್ಯವನ್ನು ಉಪಯೋಗಿಸಲು ಒಪ್ಪುತ್ತಾರೆ.

4.8 ಮಾಹಿತಿ ತಂತ್ರಜ್ಞಾನ ಕಾಯ್ದೆ 2000ರ ಪ್ರಕಾರ, ಚಂದಾದಾರನು ತನ್ನ ಡಿಜಿಟಲ್ ಸಹಿಯನ್ನು ಲಗತ್ತಿಸುವ ಮೂಲಕ ಕಾಯ್ದೆಯಡಿ ಕಾನೂನು ಮಾನ್ಯತೆ ನೀಡಿದಂತೆ ಎಲೆಕ್ಟ್ರಾನಿಕ್ ದಾಖಲೆಯನ್ನು ದೃಢೀಕರಿಸಬಹುದು. ಮೊಬೈಲ್ ಸಂಖ್ಯೆ, ಎಂ ಪಿನ್ ಅಥವಾ ಯಾವುದೇ ರೀತಿಯಿಂದ ಇವು ಐಟಿ ಕಾಯ್ದೆ 2000ರ ಅಡಿಯಲ್ಲಿ ಸೂಚಿತಗೊಂಡಿರದಿದ್ದರೂ ಗ್ರಾಹಕರು ಎಲೆಕ್ಟ್ರಾನಿಕ್ ದಾಖಲೆಗಳನ್ನು ದೃಢೀಕರಿಸಲು ಬ್ಯಾಂಕ್ ಅಧಿಕಾರ ನೀಡುತ್ತದೆ. ಮತ್ತು ಗ್ರಾಹಕರು ಇದಕ್ಕೆ ಬದ್ಧರಾಗಿರುತ್ತಾರೆ. ಆದ್ದರಿಂದ ಎಂ ಪಿನ್ ರಹಸ್ಯ ಮತ್ತು ಗೌಪ್ಯತೆಯನ್ನು ಕಾಪಾಡಿಕೊಳ್ಳಲು ಗ್ರಾಹಕನು ಸಂಪೂರ್ಣ ಜವಾಬ್ದಾರನಾಗಿರುತ್ತಾನೆ ಬ್ಯಾಂಕಿಗೆ ಈ ಕುರಿತು ಯಾವುದೇ ಹೊಣೆಗಾರಿಕೆಯಿಲ್ಲ.

## 5. ಇತರ

5.1 ಗ್ರಾಹಕನು ಸೌಲಭ್ಯವನ್ನು ಬಳಸುವ ಮುನ್ನ ಆತ/ಆಕೆ ಅದರ ಪ್ರಕ್ರಿಯೆಯ ಕುರಿತಾಗಿ ಪೂರ್ಣ ಪರಿಚಯ ಮಾಡಿಕೊಳ್ಳಬೇಕು ಮತ್ತು ಸೌಲಭ್ಯವನ್ನು ಬಳಸುವಾಗ ಮಾಡಿದ ಯಾವುದೇ ದೋಷಕ್ಕೆ ಆತ/ಆಕೆ ಜವಾಬ್ದಾರರಾಗಿರಬೇಕು. ಕಾನೂನುಬಾಹಿರ ಚಟುವಟಿಕೆಗಳಿಗಾಗಿ ಗ್ರಾಹಕರು ಎಂಬಿಎಸ್ ಅನ್ನು ಬಳಸಬಾರದು.

5.2 ಯಾವ ಸೇವೆಗಳನ್ನು ನೀಡಬಹುದೆಂದು ನಿರ್ಧರಿಸುವ ಹಕ್ಕನ್ನು ಬ್ಯಾಂಕ್ ಹೊಂದಿದೆ. ಸೌಲಭ್ಯದಡಿಯಲ್ಲಿ ನೀಡಲಾಗುವ ಸೇವೆಗಳಿಗೆ ಸೇರ್ಪಡೆ/ರದ್ದುಪಡಿಸುವಿಕೆಗಳು ಅದರ ಸ್ವಂತ ವಿವೇಚನೆಗೆ ಸೇರಿದೆ.

5.3 ಗ್ರಾಹಕರ ಸೂಚನೆಗಳು ಆತನ/ಆಕೆಯ ಬಳಕೆದಾರ ಐಡಿ ಮತ್ತು ಎಂ ಪಿನ್ ಮೂಲಕ ಅಥವಾ ಬ್ಯಾಂಕಿನ ವಿವೇಚನೆಯಿಂದ ನಿಗದಿಪಡಿಸಿರುವ ಯಾವುದೇ ಪರಿಶೀಲನಾ ವಿಧಾನದ ಮೂಲಕ ದೃಢೀಕರಣಗೊಂಡ ಬಳಿಕ ಮಾತ್ರ ಪರಿಣಾಮ ಬೀರುತ್ತವೆ.

5.4 ಗ್ರಾಹಕರಿಂದ ಪಡೆದ ಸೂಚನೆಗಳನ್ನು ತಪ್ಪದೆ, ತ್ವರಿತವಾಗಿ ಅನ್ವಯಿಸಲು ಬ್ಯಾಂಕ್ ಪ್ರಯತ್ನ ಪಡುತ್ತಾದರೂ, ಕಾರ್ಯಾಚರಣೆ ವ್ಯವಸ್ಥೆಯ ವೈಫಲ್ಯ ಸೇರಿದಂತೆ ಯಾವುದೇ ಕಾರಣಗಳಿಂದಾಗಿ ಅಥವಾ ಯಾವುದೇ ಕಾನೂನಿನ ಆವಶ್ಯಕತೆಗಳಿಗಾಗಿ ಸೂಚನೆಗಳು ಅನ್ವಯವಾಗುವಲ್ಲಿನ ವಿಳಂಬ/ವೈಫಲ್ಯಕ್ಕೆ ಬ್ಯಾಂಕ್ ಜವಾಬ್ದಾರನಾಗಿರುವುದಿಲ್ಲ. ಸೌಲಭ್ಯದ ಅಡಿಯಲ್ಲಿ ಸೇವೆಗಳನ್ನು ನೀಡಲು ಅಗತ್ಯವಾದ ತನ್ನ ಖಾತೆ ಮಾಹಿತಿಯನ್ನು ಬಳಸಿಕೊಳ್ಳಲು ಬ್ಯಾಂಕಿಗೆ ಅಧಿಕಾರ ನೀಡುತ್ತಾರೆ ಮತ್ತು ಸೌಲಭ್ಯದ ಅಡಿಯಲ್ಲಿ ಸೇವೆಗಳನ್ನು ಒದಗಿಸಲು ಅಗತ್ಯವಿರುವಂತೆ ತನ್ನ ಖಾತೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸೇವಾ ಪೂರೈಕೆದಾರ/ಮೂರನೇ ಸಂಸ್ಥೆಯೊಂದಿಗೆ ಹಂಚಿಕೊಳ್ಳಲು ಸಹ ಗ್ರಾಹಕ ಸ್ಪಷ್ಟವಾಗಿ ಅಧಿಕಾರ ನೀಡುತ್ತಾರೆ.

5.5 ವಹಿವಾಟಿನ ವಿವರಗಳನ್ನು ಬ್ಯಾಂಕ್ ದಾಖಲಿಸುತ್ತದೆ ಮತ್ತು ಈ ದಾಖಲೆಗಳನ್ನು ವಹಿವಾಟಿನ ಸತ್ಯಾಸತ್ಯತೆ ಮತ್ತು ನಿಖರತೆಯ ನಿರ್ಣಾಯಕ ಪುರಾವೆಯಾಗಿ ಪರಿಗಣಿಸಲಾಗುತ್ತದೆ

5.6 ಬ್ಯಾಂಕಿನ ಉತ್ಪನ್ನಗಳ ಬಗ್ಗೆ, ಶುಭಾಶಯಗಳು ಅಥವಾ ಕಾಲಕಾಲಕ್ಕೆ ಬ್ಯಾಂಕ್ ಪರಿಗಣಿಸಬಹುದಾದ ಯಾವುದೇ ಸಂದೇಶಗಳನ್ನು ಒಳಗೊಂಡಂತೆ ಪ್ರಚಾರದ ಸಂದೇಶಗಳನ್ನು ಕಳುಹಿಸಲು ಬ್ಯಾಂಕ್ ಅಥವಾ ಅದರ ಏಜೆಂಟರಿಗೆ ಗ್ರಾಹಕರು ಈ ಮೂಲಕ ಅಧಿಕಾರ ನೀಡುತ್ತಾರೆ.

5.7 ಗ್ರಾಹಕರು ಕಳುಹಿಸಿದ ಸೇವಾ ವಿನಂತಿಯನ್ನು ಯಾವುದೇ ಕಾರಣಕ್ಕೂ ಕಾರ್ಯಗತಗೊಳಿಸ–ಲಾಗುವುದಿಲ್ಲವೆಂದಾದರೆ, ಬ್ಯಾಂಕ್ 'ನಿರಾಕರಣೆ' ಅಥವಾ 'ಪ್ರಕ್ರಿಯೆ ನಡೆಸಲು ಸಾಧ್ಯವಿಲ್ಲ' ಎಂಬ ಸಂದೇಶವನ್ನು ಕಳುಹಿಸಬಹುದು ಎಂದು ಗ್ರಾಹಕರು ಅರ್ಥಮಾಡಿಕೊಳ್ಳುತ್ತಾರೆ.

5.8 ಗ್ರಾಹಕರ ಮಾಹಿತಿಯನ್ನು ಗೌಪ್ಯವಾಗಿರಿಸಲು ಬ್ಯಾಂಕ್ ಎಲ್ಲಾ ಸಮಂಜಸವಾದ ಪ್ರಯತ್ನಗಳನ್ನು ಮಾಡುತ್ತದೆ. ಆದರೆ ತನ್ನ ಯಾವುದೇ ನಿಯಂತ್ರಣ ಮೀರಿದ ಕಾರಣಗಳಿಗಾಗಿ ಅಥವಾ ಯಾವುದೇ ಹೊರಗಿನ ಕಾರಣಗಳಿಂದಾಗಿ ಗೌಪ್ಯವಾದ ಗ್ರಾಹಕ ಮಾಹಿತಿಯ ಯಾವುದೇ ರೀತಿಯಲ್ಲಿ ಅಜಾಗರೂಕವಾಗಿ ಬಹಿರಂಗಗೊಂಡರೆ ಅಥವಾ ಸೋರಿಕೆಯಾದಲ್ಲಿ ಬ್ಯಾಂಕ್ ಜವಾಬ್ದಾರನಾಗುವುದಿಲ್ಲ.

5.9 ಗ್ರಾಹಕನು ತನ್ನ ಮೊಬೈಲ್ ಫೋನ್‌ನಿಂದ ಹೊರಹೊಮ್ಮಿದ ಮತ್ತು ತನ್ನ ಎಂಪಿನ್ನಿನಿಂದ ದೃಢೀಕರಿಸಲ್ಪಟ್ಟ ಎಲ್ಲಾ ವಿನಂತಿಗಳನ್ನು/ವಹಿವಾಟುಗಳನ್ನು ನಡೆಸಲು ಬ್ಯಾಂಕ್‌ಗೆ ಸ್ಪಷ್ಟ ಅಧಿಕಾರವನ್ನು ನೀಡುತಾರೆ. ನಿಧಿ ವರ್ಗಾವಣೆ, ಮೊಬೈಲ್ ಟಾಪ್ ಅಪ್, ಬಿಲ್ ಪಾವತಿ ಮುಂತಾದ ಪಾವತಿ ಸೌಲಭ್ಯಗಳ ಸಂದರ್ಭದಲ್ಲಿ, ಗ್ರಾಹಕರಿಂದ ವಿನಂತಿಯನ್ನು ಸ್ವೀಕರಿಸಿದಾಗ ಅದರ ಪಾವತಿಗೆ ಗ್ರಾಹಕರಿಂದ ಬ್ಯಾಂಕಿಗೆ ಸ್ಪಷ್ಟ ಅಧಿಕಾರ ಸಿಕ್ಕಿದೆ ಎಂದು ಪರಿಗಣಿಸಲಾಗುತ್ತದೆ.

5.10 ತನ್ನ ಮೊಬೈಲ್ ಸಂಖ್ಯೆಯಲ್ಲಿನ ಯಾವುದೇ ಬದಲಾವಣೆ ಅಥವಾ ಮೊಬೈಲ್ ಫೋನಿನ ನಷ್ಟ/ಕಳ್ಳತನದ ಬಗ್ಗೆ, ಬ್ಯಾಂಕ್ ನಿಗದಿಪಡಿಸಿದ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳುವ ಮೂಲಕ ಬ್ಯಾಂಕ್‌ಗೆ ತಿಳಿಸುವುದು ಗ್ರಾಹಕನ ಜವಾಬ್ದಾರಿಯಾಗಿದೆ.

5.11 ಗ್ರಾಹಕರ ಟೆಲಿಕಾಂ ಸೇವಾ ಪೂರೈಕೆದಾರರು ಪ್ರತಿ ಎಸ್‌ಎಂಎಸ್/ಡಯಲ್/ಜಿಪಿಆರ್‌ಎಸ್‌ಗೆ ಶುಲ್ಕ ವಿಧಿಸಬಹುದು ಮತ್ತು ಅಂತಹ ಟೆಲಿಕಾಂ ಸೇವಾ ಪೂರೈಕೆದಾರರು ಮತ್ತು ಗ್ರಾಹಕರ ನಡುವೆ ಉದ್ಭವಿಸುವ ಯಾವುದೇ ವಿವಾದಗಳಿಗೆ ಬ್ಯಾಂಕ್ ಜವಾಬ್ದಾರನಾಗಿರುವುದಿಲ್ಲ.

## 6. ಸೌಲಭ್ಯದ ಶುಲ್ಕ ವಿವರ

ಸೌಲಭ್ಯದಡಿಯಲ್ಲಿ ಒದಗಿಸಲಾದ ಸೇವೆಗಳ ಬಳಕೆಗಾಗಿ ಗ್ರಾಹಕರಿಗೆ ಶುಲ್ಕ ವಿಧಿಸುವ ಮತ್ತು ತನ್ನ ವಿವೇಚನೆಯಿಂದ ಶುಲ್ಕವನ್ನು ಮಾರ್ಪಡಿಸುವ ಹಕ್ಕನ್ನು ಬ್ಯಾಂಕ್ ಹೊಂದಿದೆ. ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಅಂತಹ ಶುಲ್ಕಗಳ ವಿವರವನ್ನು ಪ್ರಕಟಿಸಲಾಗುತ್ತದೆ ಹಾಗೂ ಈ ಪ್ರಕಟಣೆಯೇ ಗ್ರಾಹಕರಿಗೆ ತಕ್ಕ ಸೂಚನೆಯಾಗಿದೆ. ಮತ್ತು ಗ್ರಾಹಕರು ಇದಕ್ಕೆ ಬದ್ಧರಾಗಿರುತ್ತಾರೆ.

## 7. ಮಾಹಿತಿಯ ನಿಖರತೆ

7.1 ಸೌಲಭ್ಯವನ್ನು ಬಳಸುವ ಮೂಲಕ ಅಥವಾ ಇನ್ನಾವುದೇ ವಿಧಾನದ ಮೂಲಕ ಬ್ಯಾಂಕ್‌ಗೆ ಸರಿಯಾದ ಮಾಹಿತಿಯನ್ನು ಒದಗಿಸುವುದು ಗ್ರಾಹಕರ ಜವಾಬ್ದಾರಿಯಾಗಿದೆ. ಈ ಮಾಹಿತಿಯಲ್ಲಿ ಯಾವುದೇ ವ್ಯತ್ಯಾಸಗಳಿದ್ದಲ್ಲಿ, ಮಾಹಿತಿಯ ಆಧಾರದ ಮೇಲೆ ತೆಗೆದುಕೊಳ್ಳುವ ಕ್ರಮಕ್ಕೆ ಬ್ಯಾಂಕ್ ಯಾವುದೇ ರೀತಿಯಲ್ಲಿ ಜವಾಬ್ದಾರನಾಗಿರುವುದಿಲ್ಲ ಎಂದು ಗ್ರಾಹಕರು ಅರ್ಥಮಾಡಿಕೊಳ್ಳುತ್ತಾರೆ. ಅಂತಹ ದೋಷದ ಬಗ್ಗೆ ಗ್ರಾಹಕರು ಮಾಹಿತಿ ನೀಡಿದ್ದರೆ, ಬ್ಯಾಂಕ್ ಆ ದೋಷವನ್ನು ತ್ವರಿತವಾಗಿ ಸರಿಪಡಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತದೆ.

7.2 ನಿಖರವಾದ ಮಾಹಿತಿಯನ್ನು ಒದಗಿಸಲು ಬ್ಯಾಂಕ್ ತನ್ನ ಸಾಮರ್ಥ್ಯ ಮೀರಿ ಪ್ರಯತ್ನಿಸುತ್ತದೆ ಮತ್ತು ಬ್ಯಾಂಕಿನ ನಿಯಂತ್ರಣ ಮೀರಿದ ಕಾರಣಗಳಿಂದಾಗಿ ಸಂಭವಿಸಬಹುದಾದ ಯಾವುದೇ ದೋಷಗಳು ಅಥವಾ ಲೋಪಗಳಿಗೆ ಬ್ಯಾಂಕ್ ಜವಾಬ್ದಾರರಾಗಿರುವುದಿಲ್ಲ ಎಂದು ಗ್ರಾಹಕರು ಅರ್ಥಮಾಡಿಕೊಳ್ಳುತ್ತಾರೆ

7.3 ಮಾಹಿತಿಯ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಬ್ಯಾಂಕ್ ಕೈಗೊಂಡ ಕ್ರಮಗಳ ಹೊರತಾಗಿಯೂ ಸಂಭವಿಸುವ ಯಾವುದೇ ದೋಷಗಳಿಗೆ ಬ್ಯಾಂಕ್ ಜವಾಬ್ದಾರನಾಗಿರುವುದಿಲ್ಲ ಮತ್ತು ಯಾವುದೇ ಬ್ಯಾಂಕ್ ಒದಗಿಸಿದ ದೋಷಪೂರಿತ ಎಂದು ಕಂಡುಬಂದ ಮಾಹಿತಿಯ ಪರಿಣಾಮವಾಗಿ ನಷ್ಟ/ಹಾನಿ ಸಂಭವಿಸಿದಲ್ಲಿ ಬ್ಯಾಂಕನ್ನು ಹೊಣೆಗಾರನನ್ನಾಗಿಸುವುದಿಲ್ಲ ಎಂದು ಗ್ರಾಹಕರು ಒಪ್ಪಿಕೊಳ್ಳುತ್ತಾರೆ.

## 8. ಗ್ರಾಹಕರ ಜವಾಬ್ದಾರಿಗಳು ಮತ್ತು ಹೊಣೆಗಾರಿಕೆಗಳು

8.1 ಗ್ರಾಹಕರು ತಮ್ಮ ಮೊಬೈಲ್ ಫೋನ್, ಸಿಮ್ ಕಾರ್ಡ್ ಮತ್ತು ಎಂ ಪಿನ್ ಬಳಕೆಯ ಮೂಲಕ ಮಾಡಿದ ಅನಧಿಕೃತ/ನಿಖರವಲ್ಲದ/ಸರಿಯಲ್ಲದ/ತಪ್ಪಾದ/ದೋಷಪೂರಿತ ವಹಿವಾಟುಗಳು ಸೇರಿದಂತೆ ಎಲ್ಲಾ ವಹಿವಾಟುಗಳಿಗೆ ಜವಾಬ್ದಾರನಾಗಿರುತ್ತಾರೆ. ಅಂತಹ ವಹಿವಾಟುಗಳು ವಾಸ್ತವವಾಗಿ ಆತನಿಂದ/ಆಕೆಯಿಂದ ಅಧಿಕೃತಗೊಂಡಿದೆಯೇ, ಇಲ್ಲವೇ ಎಂಬುದನ್ನು ಪರಿಗಣಿಸಲಾಗುವುದಿಲ್ಲ. ಅಂತಹ ಎಲ್ಲಾ ವಹಿವಾಟುಗಳಿಗೆ ಸಂಬಂಧಿಸಿದಂತೆ ಗ್ರಾಹಕರು ನಷ್ಟ ಅನುಭವಿಸಿದರೆ ಆ ನಷ್ಟ/ಹಾನಿಗೆ ಅವರೇ ಜವಾಬ್ದಾರರಾಗಿರುತಾರೆ

8.2 ಅಪ್ಲಿಕೇಶನ್ ಮತ್ತು ಆತನ/ಆಕೆಯ ಮೊಬೈಲ್ ಫೋನ್ ಅನ್ನು ಯಾರೊಂದಿಗೂ ಹಂಚಿಕೊಳ್ಳದಿರಲು ಸಾಧ್ಯವಿರುವ ಎಲ್ಲ ಮುಂಜಾಗರೂಕತೆಯ ಕ್ರಮಗಳನ್ನು ಗ್ರಾಹಕರು ಕೈಗೊಳ್ಳಬೇಕು. ಮತ್ತು ಮೊಬೈಲ್ ಫೋನ್ ಅಥವಾ ಸಿಮ್ ಕಾರ್ಡ್ ದುರುಪಯೋಗವಾದರೆ/ಕಳ್ಳತನವಾದರೆ/ಕಳೆದುಹೋದರೆ ಅಂತಹ ಸಂದರ್ಭದಲ್ಲಿ ನಿಗದಿಪಡಿಸಿದ ಕಾರ್ಯವಿಧಾನದ ಪ್ರಕಾರ ಎಂಬಿಎಸ್‌ನಿಂದ ನೋಂದಣಿಯನ್ನು ರದ್ದುಗೊಳಿಸಲು ತಕ್ಷಣದ ಕ್ರಮ ತೆಗೆದುಕೊಳ್ಳಬೇಕು.

8.3 ನಿಯಮ ಮತ್ತು ಷರತ್ತುಗಳನ್ನು ಒಳಗೊಂಡಂತೆ ಕಾಲಕಾಲಕ್ಕೆ ಬ್ಯಾಂಕ್ ನಿಗದಿಪಡಿಸಿದ ಕಾರ್ಯವಿಧಾನಕ್ಕೆ ಅನುಗುಣವಾಗಿ ಎಂಪಿನ್ ಬಳಸಿ ಸೌಲಭ್ಯದಡಿಯಲ್ಲಿ ನೀಡಲಾಗುವ ಸೇವೆಗಳನ್ನು ಗ್ರಾಹಕರು ಬಳಸುತ್ತಾರೆ.

8.4 ಗ್ರಾಹಕರು ಬಳಕೆದಾರ ಐಡಿ ಮತ್ತು ಎಂಪಿನ್‌ನ್ನು ಗೌಪ್ಯವಾಗಿಡಬೇಕು ಮತ್ತು ಇವುಗಳನ್ನು ಬೇರೆ ಯಾವುದೇ ವ್ಯಕ್ತಿಗೆ ಬಹಿರಂಗಪಡಿಸಬಾರದು ಅಥವಾ ಅದರ ಗೌಪ್ಯತೆ ಅಥವಾ ಸೇವೆಯ ಸುರಕ್ಷತೆಗೆ ಧಕ್ಕೆಯುಂಟುಮಾಡುವ ರೀತಿಯಲ್ಲಿ ಅವುಗಳನ್ನು ಎಲ್ಲಿಯೂ ದಾಖಲಿಸಿಡಬಾರದು

8.5 ಎಂಪಿನ್‌ನ ದುರುಪಯೋಗವಾಗಿದೆ ಎಂದು ಗ್ರಾಹಕರಿಗೆ ಅನುಮಾನವಾದರೆ ತಕ್ಷಣ ಬ್ಯಾಂಕ್‌ಗೆ ತಿಳಿಸುವುದು ಅವರ ಜವಾಬ್ದಾರಿಯಾಗಿದೆ. ಕೂಡಲೇ ತಮ್ಮ ಎಂಪಿನ್‌ನ್ನು ಬದಲಾಯಿಸಲು ಅಗತ್ಯವಾದ ಕ್ರಮಗಳನ್ನು ಗ್ರಾಹಕರು ಕೈಗೊಳ್ಳಬೇಕು.

8.6 ಮೊಬೈಲ್ ಫೋನ್ ಅಥವಾ ಸಿಮ್ ಕಳೆದುಹೋದರೆ, ಎಂಬಿಎಸ್ ಅನ್ನು ಸಕ್ರಿಯಗೊಳಿಸಿದ ಪ್ರಾಥಮಿಕ ಖಾತೆ ಇರುವ ಮೂಲ ಶಾಖೆಯನ್ನು ಸಂಪರ್ಕಿಸಿ, ಎಂಬಿಎಸ್ ನೋಂದಣಿಯನ್ನು ರದ್ದುಮಾಡಲು ಗ್ರಾಹಕರು ತಕ್ಷಣ ಕ್ರಮ ತೆಗೆದುಕೊಳ್ಳಬೇಕು.

8.7 ಬಳಕೆದಾರರ ಐಡಿ ಮತ್ತು/ಅಥವಾ ನೋಂದಾಯಿತ ಮೊಬೈಲ್ ಫೋನ್ ಸಂಖ್ಯೆಯಿಂದ ಮಾಡಿದ ಯಾವುದೇ ಮಾನ್ಯವಾದ ವಹಿವಾಟನ್ನು ಗ್ರಾಹಕರೇ ಮಾಡಿದ್ದಾರೆ. ಮತ್ತು ಎಂಪಿನ್ನಿನಿಂದ ಅಧಿಕೃತವಾದ ಯಾವುದೇ ವಹಿವಾಟು ನಿಖರವಾಗಿ ಮತ್ತು ಕಾನೂನುಬದ್ಧವಾಗಿ ಗ್ರಾಹಕರಿಂದ ಅಧಿಕೃತಗೊಂಡಿದೆ ಎಂದು ತಿಳಿಯಲಾಗುತ್ತದೆ ಎಂಬುದನ್ನು ಗ್ರಾಹಕರು ಒಪ್ಪಿಕೊಳ್ಳುತ್ತಾರೆ.

8.8 ಸೌಲಭ್ಯದ ಅಡಿಯಲ್ಲಿ ನೀಡಲಾಗುವ ಸೇವೆಗಳಿಗೆ ಸಂಬಂಧಿಸಿದ ಯಾವುದೇ ಮಾಹಿತಿ/ಮಾರ್ಪಾಟುಗಳನ್ನು ಗ್ರಾಹಕರು ತಮ್ಮ ಖಾತೆ ಇರುವ ಶಾಖೆಯಿಂದ ಅಥವಾ ಬ್ಯಾಂಕ್‌ನ ವೆಬ್‌ಸೈಟ್ ಪ್ರಕಟಣೆಯಿಂದ ತಿಳಿದುಕೊಳ್ಳಬೇಕು ಮತ್ತು ಸೌಲಭ್ಯವನ್ನು ಬಳಸಿಕೊಳ್ಳುವಾಗ ಅಂತಹ ಮಾಹಿತಿ ಮಾರ್ಪಾಟುಗಳನ್ನು ಅಂಗೀಕರಿಸುವುದು/ ಅನುಪಾಲನೆ ಮಾಡುವುದು ಗ್ರಾಹಕ ಜವಾಬ್ದಾರಿಯಾಗಿರುತ್ತದೆ.

8.9 ಇಲ್ಲಿ ಒಳಗೊಂಡಿರುವ ಎಲ್ಲ ನಿಯಮ ಮತ್ತು ಷರತ್ತುಗಳ ನಷ್ಟ ಅಥವಾ ಉಲ್ಲಂಘನೆಗಳಿಗೆ ಅಥವಾ ನಿರ್ಲಕ್ಷ್ಯದ ಕ್ರಮಗಳಿಂದಾದ ನಷ್ಟ ಅಥವಾ ಖಾತೆಯ ಯಾವುದೇ ಅನಧಿಕೃತ ಬಳಕೆಯ ಬಗ್ಗೆ ಸೂಕ್ತ ಸಮಯದೊಳಗೆ ಬ್ಯಾಂಕಿಗೆ ಮಾಹಿತಿ ನೀಡುವಲ್ಲಿ ವಿಫಲನಾಗಿ ನಷ್ಟವುಂಟಾದರೆ ಅಥವಾ ನಷ್ಟವುಂಟಾಗಲು ಕೊಡುಗೆ ನೀಡಿದ್ದರೆ ಗ್ರಾಹಕನು ಜವಾಬ್ದಾರನಾಗಿರುತ್ತಾನೆ.

8.10 ಸೌಲಭ್ಯವನ್ನು ಪಡೆಯಲು ಉಪಯೋಗಿಸಿದ ಮೊಬೈಲ್ ಸಂಪರ್ಕ/ಸಿಮ್ ಕಾರ್ಡ್/ಮೊಬೈಲ್ ಫೋನ್‌ಗೆ ಸಂಬಂಧಿಸಿದಂತೆ ಎಲ್ಲಾ ವಾಣಿಜ್ಯ ನಿಯಮ ಮತ್ತು ಷರತುಗಳನ್ನು ಅಂಗೀಕರಿಸಲು ಮತ್ತು ಪಾಲಿಸಲು ಗ್ರಾಹಕರೆ ಜವಾಬ್ದಾರನಾಗಿರುತಾರೆ ಮತ್ತು ಈ ನಿಟ್ಟಿನಲ್ಲಿ ಬ್ಯಾಂಕ್ ಯಾವುದೇ ಜವಾಬ್ದಾರಿಯನ್ನು ಸ್ವೀಕರಿಸುವುದಿಲ್ಲ/ಅಂಗೀಕರಿಸುವುದಿಲ್ಲ.

8.11 ಖಾತೆ ನಿರ್ವಾಹಣೆಯ ವಿಧಾನದಲ್ಲಿ ಯಾವುದೇ ಬದಲಾವಣೆಯಾದಲ್ಲಿ ಆ ಬಗ್ಗೆ, ಎಂಬಿಎಸ್ ಕುರಿತು ನಿರ್ದಿಷ್ಟ ಉಲ್ಲೇಖವನ್ನು ಮಾಡಿ, ಪ್ರತ್ಯೇಕ ಸಂವಹನದ ಮೂಲಕ ಬ್ಯಾಂಕಿಗೆ ತಿಳಿಸುವುದು ಗ್ರಾಹಕರ ಜವಾಬ್ದಾರಿಯಾಗಿದೆ. ಖಾತೆ ನಿರ್ವಹಣೆಯಲ್ಲಿ ಬೇರೆ ಯಾವುದೇ ಬದಲಾವಣೆಯಾದರೂ ಬ್ಯಾಂಕ್‌ಗೆ ತಿಳಿಸುವುದು ಸಹಾ ಗ್ರಾಹಕರ ಜವಾಬ್ದಾರಿಯಾಗಿದೆ, ಇಲ್ಲದಿದ್ದರೆ ಖಾತೆಯು ಎಂಬಿಎಸ್‌ಗೆ ಅನರ್ಹವಾಗಬಹುದು, ಬ್ಯಾಂಕಿಗೆ ಪ್ರತ್ಯೇಕವಾಗಿ ತಿಳಿಸಲು ಗ್ರಾಹಕರು ವಿಫಲವಾದಲ್ಲಿ ಈ ಸೌಲಭ್ಯದ ಮೂಲಕ ನಡೆಸುವ ಎಲ್ಲಾ ವ್ಯವಹಾರಗಳಿಗೆ ಎಲ್ಲಾ ಖಾತೆದಾರರು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಬದ್ಧರಾಗಿರುತ್ತಾರೆ.

## 9. ಹಕ್ಕುನಿರಾಕರಣೆ

9.1 ಬ್ಯಾಂಕ್ ವಿಶ್ವಾಸಬದ್ಧವಾಗಿದ್ದು, ಈ ಕೆಳಗಿನ ಸಂದರ್ಭಗಳಲ್ಲಿ , ಯಾವುದೇ ಹೊಣೆಗಾರಿಕೆಯಿಂದ ಸಂಪೂರ್ಣವಾಗಿ ಮುಕ್ತವಾಗಿರುತ್ತದೆ: ಗ್ರಾಹಕರಿಂದ ಯಾವುದೇ ವಿನಂತಿಗಳನ್ನು ಸ್ವೀಕರಿಸಲು ಅಥವಾ ಕಾರ್ಯಗತಗೊಳಿಸಲು ಬ್ಯಾಂಕಿಗೆ ಸಾಧ್ಯವಾಗದಿದ್ದಾಗ ಅಥವಾ ಪ್ರಕ್ರಿಯೆ ಅಥವಾ ಪ್ರಸರಣದ ಸಮಯದಲ್ಲಿ ಮಾಹಿತಿಯ ನಷ್ಟವುಂಟಾದರೆ, ಅಥವಾ ಯಾವುದೇ ವ್ಯಕ್ತಿಯಿಂದ ಅನಧಿಕೃತ ಬಳಕೆ ಅಥವಾ ಗೌಪ್ಯತೆಯ ಉಲ್ಲಂಘನೆ ಅಥವಾ ಬ್ಯಾಂಕಿನ ನಿಯಂತ್ರಣವನ್ನು ಮೀರಿದ ಕಾರಣಗಳಿಂದಾಗಿ. ಬ್ಯಾಂಕಿನ ನಿಯಂತ್ರಣಕ್ಕೆ ಮೀರಿ ಸೌಲಭ್ಯದಲ್ಲಿನ ಯಾವುದೇ ವೈಫಲ್ಯ ಅಥವಾ ಕೊರತೆಯಿಂದಾಗಿ ಗ್ರಾಹಕ ಅಥವಾ ಇನ್ನಾರಾದರೂ ವ್ಯಕ್ತಿಯಿಂದ ನೇರ ಅಥವಾ ಪರೋಕ್ಷ ರೀತಿಯಲ್ಲಿ ನಷ್ಟವುಂಟಾದರೆ. ಮಾಹಿತಿ ರವಾನೆಯಲ್ಲಿ ಯಾವುದೇ ವೈಫಲ್ಯ ಅಥವಾ ವಿಳಂಬ ಅಥವಾ ಮಾಹಿತಿಯ ನಿಖರತೆಯಲ್ಲಿ ದೋಷವಿದ್ದರೆ ಅಥವಾ ತಂತ್ರಜ್ಞಾನ ವೈಫಲ್ಯ, ಯಾಂತ್ರಿಕ ಸ್ಥಗಿತ, ವಿದ್ಯುತ್ ಅಡ್ಡಿ ಇತ್ಯಾದಿ ಸೇರಿದಂತೆ ಬ್ಯಾಂಕಿನ ನಿಯಂತ್ರಣ ಮೀರಿ ಯಾವುದೇ ಪರಿಣಾಮಗಳು ಉಂಟಾಗುವುದು, ಇದರಲ್ಲಿ ಯಾವುದೇ ಪೂರೈಕೆದಾರರು ಒದಗಿಸುವ ಸೇವೆಯ ಗುಣಮಟ್ಟಕ್ಕೆ ಬ್ಯಾಂಕ್ ಯಾವುದೇ ಖಾತರಿ ನೀಡುವುದಿಲ್ಲವಾದ್ದರಿಂದ ಸೇವಾ ಪೂರೈಕೆದಾರರ ಕಡೆಯಿಂದ ಯಾವುದೇ ನಷ್ಟ ಅಥವಾ ವೈಫಲ್ಯವುಂಟಾಗುವುದು ಅಥವಾ ಸೌಲಭ್ಯದ ಮೇಲೆ ಯಾವುದೇ ಮೂರನೇ ವ್ಯಕ್ತಿಯು ಪರಿಣಾಮ ಬೀರುವುದು

9.2 ಆದಾಯ, ಲಾಭ, ವ್ಯವಹಾರ, ಒಪ್ಪಂದಗಳು, ನಿರೀಕ್ಷಿತ ಉಳಿತಾಯ ಅಥವಾ ಸದ್ಭಾವನೆ, ಸಾಫ್ಟ್‌ವೇರ್ ಸೇರಿದಂತೆ ಯಾವುದೇ ಸಲಕರಣೆಗಳ ಬಳಕೆ ಅಥವಾ ಮೌಲ್ಯದ ನಷ್ಟವನ್ನು ಒಳಗೊಂಡಂತೆ ಆದರೆ ಅದಕ್ಕೆ ಮಾತ್ರ ಸೀಮಿತವಾಗಿರದೆ, ನಿರೀಕ್ಷಿತವಾದ ಅಥವಾ ಅಲ್ಲದಿರುವ, ವಿನಂತಿಯನ್ನು ಸ್ವೀಕರಿಸುವಲ್ಲಿ ಮತ್ತು ಪ್ರಕ್ರಿಯೆಗೊಳಿಸುವಲ್ಲಿ ಬ್ಯಾಂಕಿನ ಯಾವುದೇ ವಿಳಂಬ, ಪ್ರತಿಕ್ರಿಯೆಗಳನ್ನು ರೂಪಿಸುವಲ್ಲಿ ಮತ್ತು ಹಿಂದಿರುಗಿಸುವಲ್ಲಿ ಅಥವಾ ಯಾವುದೇ ಮಾಹಿತಿ ಅಥವಾ ಸಂದೇಶವನ್ನು ಗ್ರಾಹಕರ ದೂರಸಂಪರ್ಕ ಸಾಧನಗಳಿಗೆ ಮತ್ತು ಯಾವುದೇ ಸೇವಾ ಪೂರೈಕೆದಾರರ ನೆಟ್‌ವರ್ಕ್ ಮತ್ತು ಬ್ಯಾಂಕಿನ ವ್ಯವಸ್ಥೆಗೆ ಯಾವುದೇ ಮಾಹಿತಿ ಅಥವಾ ಸಂದೇಶವನ್ನು ರವಾನಿಸುವಲ್ಲಿ ಯಾವುದೇ ವೈಫಲ್ಯ, ವಿಳಂಬ, ಅಡಚಣೆ, ಅಮಾನತು, ನಿರ್ಬಂಧ ಅಥವಾ ದೋಷ ಅಥವಾ ಗ್ರಾಹಕರ ದೂರಸಂಪರ್ಕ ಸಾಧನಗಳು, ಬ್ಯಾಂಕಿನ ಸಿಸ್ಟಮ್ ಅಥವಾ ಸೌಲಭ್ಯವನ್ನು ಒದಗಿಸುವ ಯಾವುದೇ ಸೇವಾ ಪೂರೈಕೆದಾರರು ಮತ್ತು/ಅಥವಾ ಯಾವುದೇ ಅಂತ ಸೇವೆ ನೀಡುವ ಇತರ ಸಂಸ್ಥೆಗಳಿಂದಾಗಿ ಉಂಟಾಗುವ ಯಾವುದೇ ಸ್ಥಗಿತತೆ, ಅಡಚಣೆ, ಅಮಾನತು ಅಥವಾ ವೈಫಲ್ಯಕ್ಕೆ ಸಂಬಂಧಿಸಿದಂತೆ ಉಂಟಾಗುವ ಗ್ರಾಹಕ ಅಥವಾ ಯಾವುದೇ ವ್ಯಕ್ತಿಯು ಅನುಭವಿಸಬಹುದಾದ ನೇರ, ಪರೋಕ್ಷ ಅಥವಾ ಪರಿಣಾಮಕಾರಿಯಾದ ಯಾವುದೇ ನಷ್ಟ ಅಥವಾ ಹಾನಿಗೆ ಬ್ಯಾಂಕ್, ಅದರ ಉದ್ಯೋಗಿಗಳು, ಏಜೆಂಟರು ಅಥವಾ ಗುತ್ತಿಗೆದಾರರು ಜವಾಬ್ದಾರರಾಗಿರುವುದಿಲ್ಲ.

9.3 ಗ್ರಾಹಕರ ಮೊಬೈಲ್ ಸಾಧನದಲ್ಲಿ ಅಪ್ಲಿಕೇಶನ್ ಹೊಂದಿಕೆಯಾಗದಿದ್ದರೆ/ಕಾರ್ಯನಿರ್ವಹಿಸದಿದ್ದರೆ ಬ್ಯಾಂಕ್ ಜವಾಬ್ದಾರನಾಗಿರುವುದಿಲ್ಲ

## 10. ಭದ್ರತೆ

ಗ್ರಾಹಕರಿಗೆ ಇದುವರೆಗೆ ನೀಡಿದ ಯಾವುದೇ ಸೇವೆಗಳಿಗೆ ಸಂಬಂಧಿಸಿದಂತೆ ಯಾವುದೇ ಸಮಯದಲ್ಲಿ ಉಂಟಾಗಬಹುದಾದ ಎಲ್ಲ ಕ್ರಿಯೆಗಳು, ಹೊಣೆಗಾರಿಕೆಗಳು ಮತ್ತು ಯಾವುದೇ ಸಂದರ್ಭದಲ್ಲಿ ಬ್ಯಾಂಕಿಗೆ ಉಂಟಾಗಬಹುದಾದ, ಕಾಡಬಹುದಾದ ಖರ್ಚುವೆಚ್ಚಗಳು, ಶುಲ್ಕಗಳ ವಿರುದ್ಧ ಬ್ಯಾಂಕ್ ನೀಡಿದ ಸೌಲಭ್ಯವನ್ನು ಪರಿಗಣಿಸಿ, ಕಾಪಾಡಲು ಒಪ್ಪುತ್ತಾರೆ. ಗ್ರಾಹಕರು ನೀಡಿದ ಯಾವುದೇ ಮಾಹಿತಿ/ಸೂಚನೆಗಳು/ಪ್ರಚೋದಕಗಳಿಂದಾಗಿ ಯಾವುದೇ ಮೂರನೇ ವ್ಯಕ್ತಿಯಿಂದ ಸೇವೆಯ ಅನಧಿಕೃತ ಬಳಕೆಯಾದಲ್ಲಿ ಅಥವಾ ಗೌಪ್ಯತೆಯ ಉಲ್ಲಂಘನೆಯಾದಲ್ಲಿ ಗ್ರಾಹಕರು ಬ್ಯಾಂಕ್‌ಗೆ ತಿಳಿಸಬೇಕು.

## 11. ತಕ್ಷಣದ ಪಾವತಿ ಸೇವೆ

ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (ಎನ್‌ಪಿಸಿಐ) ಆಶ್ರಯದಲ್ಲಿ ಕೆಬಿಎಲ್ ಐಎಂಪಿಎಸ್ (ತಕ್ಷಣದ ಮೊಬೈಲ್ ಪಾವತಿ ಸೇವೆ) ಎಂಬ ಹೊಸ ಸೌಲಭ್ಯವನ್ನು ನೀಡುತ್ತಿದೆ. ಈ ಸೌಲಭ್ಯವು 24x7 ಹೊತ್ತು ಲಭ್ಯವಿದೆ. ಹಣವನ್ನು ಈ ಕೆಳಗಿನ ವಿಧಾನಗಳಲ್ಲಿ ವರ್ಗಾಯಿಸಬಹುದು.

11.1 ಪಿ2ಪಿ: ವ್ಯಕ್ತಿಯಿಂದ ವ್ಯಕ್ತಿಗೆ ನಿಧಿ ವರ್ಗಾವಣೆಯು ಎಂಎಂಐಡಿ ಮತ್ತು ಮೊಬೈಲ್ ಫಲಾನುಭವಿಗಳ ಸಂಖ್ಯೆಯನ್ನು ಬಳಸಿಕೊಂಡು ಮಾಡಬಹುದು

11.2 ಪಿ2ಎ: ಖಾತೆ ಸಂಖ್ಯೆ ಮತ್ತು ಐಎಫ್‌ಎಸ್‌ಸಿ ಕೋಡ್ ಬಳಸಿ ವ್ಯಕ್ತಿಯಿಂದ ಖಾತೆಗೆ ನಿಧಿ ವರ್ಗಾವಣೆಯನ್ನು ಮಾಡಬಹುದು

11.3 ಪಿ2ಎಂ ಸೇವೆಗಳು: ಎಂಬಿಎಸ್ ವ್ಯವಸ್ಥೆಯ ಮೂಲಕ ವ್ಯಕ್ತಿಯಿಂದ ವ್ಯಾಪಾರಿ ಪ್ರತಿಷ್ಠಾನಗಳಿಗೆ. ಇದರಲ್ಲಿ ಮೊಬೈಲ್ ಬ್ಯಾಂಕಿಂಗ್ ಅಪ್ಲಿಕೇಶನ್ ಬಳಸಿ ಗ್ರಾಹಕರು ವ್ಯಾಪಾರಿಗಳಿಗೆ ಪಾವತಿ ಮಾಡಬಹುದು.

## 12. ಎಸ್‌ಎಂಎಸ್ ಬ್ಯಾಂಕಿಂಗ್

ಗ್ರಾಹಕರು ಸೇವೆಯನ್ನು ಎಸ್‌ಎಂಎಸ್ ಬ್ಯಾಂಕಿಂಗ್ ಮೂಲಕ ಬಳಸಿದಾಗ, ಬಳಕೆದಾರ ಐಡಿ ಮತ್ತು ಎಂ ಪಿನ್ ಸಂದೇಶದ ಭಾಗವಾಗಿರುತ್ತದೆ, ಅದನ್ನು ಗ್ರಾಹಕರು ಬ್ಯಾಂಕ್‌ಗೆ ವ್ಯವಹಾರವನ್ನು ಪೂರ್ಣಗೊಳಿಸಲು ಕಳುಹಿಸುತ್ತಾರೆ. ಸಂಭವನೀಯ ದುರುಪಯೋಗವನ್ನು ಪೂರ್ಣಗೊಳಿಸಲು ಹಾಗೂ ಗ್ರಾಹಕ ಮತ್ತು ಬ್ಯಾಂಕಿನ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು, ಮೊಬೈಲ್ ಸಾಧನದ ಸಂದೇಶ ಪೆಟ್ಟಿಗೆಯಲ್ಲಿ ಕಳುಹಿಸಿದ ಸಂದೇಶಗಳ ಕಡತದಿಂದ ಅಂತಹ ಸಂದೇಶವನ್ನು ಅಳಿಸುವುದು ಗ್ರಾಹಕರ ಜವಾಬ್ದಾರಿಯಾಗಿರುತ್ತದೆ.

## 13. ಆಡಳಿತ ಕಾನೂನು ಮತ್ತು ನ್ಯಾಯವ್ಯಾಪ್ತಿ

13.1 ಸೌಲಭ್ಯ ಹಾಗೂ ಅದರ ನಿಯಮ ಮತ್ತು ಷರತ್ತುಗಳು ಭಾರತದಲ್ಲಿ ಅನ್ವಯವಾಗುವ ಕಾನೂನುಗಳಿಗೆ ಅನುಗುಣವಾಗಿವೆ.

13.2 ಸೌಲಭ್ಯ ಮತ್ತು/ಅಥವಾ ಅದರ ನಿಯಮ ಮತ್ತು ಷರತ್ತುಗಳಿಗೆ ಸಂಬಂಧಿಸಿದ ಯಾವುದೇ ವಿವಾದ ಅಥವಾ ದಾವೆಗಳು ಬೆಂಗಳೂರಿನಲ್ಲಿರುವ ಸಮರ್ಥ ನ್ಯಾಯಾಲಯಗಳು/ನ್ಯಾಯಮಂಡಳಿಗಳು/ವೇದಿಕೆಗಳ ವಿಶೇಷ ನ್ಯಾಯವ್ಯಾಪ್ತಿಗೆ ಒಳಪಟ್ಟಿರುತ್ತದೆ ಮತ್ತು ಗ್ರಾಹಕರು ಬೆಂಗಳೂರಿನ ಅಂತಹ ವಿಶೇಷ ನ್ಯಾಯವ್ಯಾಪ್ತಿಗೆ ಬದ್ಧರಾಗಿರುತ್ತಾರೆ.

ದಿನಾಂಕ: ........./......../............

ಸ್ಥಳ: ................................

| | | |
|---|---|---|
| | | |
| 1ನೇ ಅರ್ಜಿದಾರರ ಸಹಿ | 2ನೇ ಅರ್ಜಿದಾರರ ಸಹಿ | 3ನೇ ಅರ್ಜಿದಾರರ ಸಹಿ |

Karnataka Bank Ltd.
Your Family Bank. Across India.

Regd. & Head Office: Mangaluru – 575 002 CIN: L85110KA1924PLC001128 E-mail: info@ktkbank.com. Visit us at: www.karnatakabank.com

F.No. 3000

# APPLICATION FOR INTERNET BANKING REGISTRATION

Name:________________________________________ Date of Birth ____ DD/MM/YYYY ____

Mother's Maiden Name ______________________ Father's/Husband's Name :____________________

E-mail ID__________________________________ Mobile Number ____________________

Address: ____________________________________________________________

__________________________ Pin Code: ________________

A/c Number________________________________________

| Customer ID | | | | | | | | |
|---|---|---|---|---|---|---|---|---|
| | | | | | | | | |

Tick any one

- ☐ I am having Classic / EMV / Gold / Platinum Debit Card and I request you to permit me online generation of Password with the use of same for validation process.
- ☐ My address given above is correct and I want my Internet Banking Password to be sent to my address mentioned above.

I/We want to apply for Karnataka Bank Internet banking facility to my/our above customer id(s) and I/We affirm, confirm, and undertake that I/We have read and understood the Terms and Conditions placed on KBL website for usage of the Internet Banking and Bill Payment Service of Karnataka Bank Ltd. and I/We am/are aware of Charges Applicable for the said Services, as set forth in www.karnatakabank .com, and that I/We confirm that I am the sole account holder or I/We have the required mandate from the joint account holder/s to singly operate the accounts and will adhere to all the terms and conditions of opening/applying/availing/ maintaining/operating (as applicable) for usage of the Internet Banking, Bill Payment Service of Karnataka Bank Limited as may be in force from time to time. I/We further authorize Karnataka Bank Limited to debit any of my/our Account(s) towards any charges for said services. I/We understand that the Internet Banking facility is Customer ID based and all my present/future account/s under the present user id are likely to be available for viewing/transacting and the same shall be maintained in good faith and any claims/damages/consequent to misuse of the same knowingly/unknowingly shall be indemnified by me.

I/We declare that all the particulars and information given in this application form (and all documents referred or provided therewith) are true, correct, complete and up-to-date in all respects and I/other joint account holders have not withheld any information. I/We understand that certain particulars given by me are required by the operational guidelines governing banking companies. I/We agree and undertake to provide any further information that Karnataka Bank Ltd. may require.

Date :

Place : ______________ **Signature of Account Holder**

## MANDATE BY JOINT ACCOUNT HOLDERS

I/We____ All joint account holders other than the first holder ____ the undersigned are the joint account holders along with ____ Applicant's name ____In account numbers ____ Account number under joint name ____I/We hereby authorize the ____ Applicant's name ____To view/access/operate the account(s) for and on my/our behalf.

I/We affirm, confirm, and undertake that I/We have read and understood the terms and conditions for usage of internet Banking Service of Karnataka Bank Ltd. as displayed on the website **www.karnatakabank.com** and that I/We agree to abide by them and I confirm and agree that the Bank is not responsible for any of his/her acts done in the capacity of the mandate holder.

I/We hereby state that should I/We wish to revoke the above authorization, I/We shall duly issue a letter of revocation ("the letter of revocation") to Karnataka Bank in this regard. I/We hereby agree that until ten days after receipt of such revocation letter, the authorization as aforestated shall hold good.

Name & Signature Name & Signature

**For Branch Use**

Branch Name :__________________________ Branch Code: ________________________

We Certify that:

- The Customer is satisfactorily dealing with us since ____________________ (date)
- The details furnished above are found to be correct with CBS. Since the account fulfills the requirements of Internet Banking please register the Customer.

**Entered By** **Checked By** **Branch Head**

- - - - ✂ - - - - Cut Here - - - - ✂ - - - -

Acknowledgement

Thank you for applying Karnataka Bank Internet Banking facility. Your Internet Banking User ID is ______________________
To Login please visit **www.karnatakabank.com**

Please feel free to call at 18004251444 or email to ccc@ktkbank.com Signature with Branch Seal

ದಿನಾಂಕ:

ಇಂದ,

ಗ್ರಾಹಕರ ಐಡಿ

ಖಾತೆ ಸಂಖ್ಯೆ.

ಗೆ,
ಶಾಖಾ ಮುಖ್ಯಸ್ಥರು

..................................
(ಶಾಖೆಯ ಹೆಸರು ಮತ್ತು ಸೋಲ್ ಐಡಿಯ ರಬ್ಬರ್ ಸ್ಟಾಂಪ್ ಅನ್ನು ಲಗತ್ತಿಸಬೇಕು)

ಮಾನ್ಯರೇ,

**ವಿಷಯ: ವೈಯಕ್ತಿಕ/ಹೆಚ್ಚುವರಿ ಮಾಹಿತಿಯನ್ನು ಒದಗಿಸುವುದರ ಬಗ್ಗೆ**

ನಿಮ್ಮ ಶಾಖೆಯಲ್ಲಿ ನನ್ನ ಮೇಲಿನ ಖಾತೆಯನ್ನು ತೆರೆಯುವಾಗ ನನಗೆ ತೋರಿದ ಸೌಜನ್ಯಕ್ಕೆ ನಿಮಗೆ ಧನ್ಯವಾದಗಳು. ಮುಂದೆ ನಾನು ಈ ಕೆಳಗಿನ ಹೆಚ್ಚುವರಿ/ವೈಯಕ್ತಿಕ ಮಾಹಿತಿಯನ್ನು ಸ್ವಯಂಪ್ರೇರಣೆಯಿಂದ ಒದಗಿಸುತ್ತೇನೆ ಮತ್ತು ಖಾತೆಯನ್ನು ತೆರೆಯಲು ಅಂತಹ ಹೆಚ್ಚುವರಿ/ವೈಯಕ್ತಿಕ ಮಾಹಿತಿಯನ್ನು ನೀಡುವುದು ಕಡ್ಡಾಯವಲ್ಲ, ಆದರೆ ಐಚ್ಛಿಕ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. ನಾನು ಒದಗಿಸುವ ಹೆಚ್ಚುವರಿ/ವೈಯಕ್ತಿಕ ಮಾಹಿತಿಯ ಆಧಾರದ ಮೇಲೆ, ಕಾಲಕಾಲಕ್ಕೆ ಬ್ಯಾಂಕ್ ನೀಡುವ ಇತರ ಉತ್ಪನ್ನಗಳ ಕುರಿತಾದ ಸೇವೆಗಳನ್ನು ಒಳಗೊಂಡಂತೆ ಸೂಕ್ತ ಹಣಕಾಸು ಯೋಜನೆಗಳು/ಉತ್ಪನ್ನಗಳನ್ನು ಸೂಚಿಸಲು/ಸಲಹೆ ನೀಡಲು ನಾನು ನಿಮಗೆ ಅಧಿಕಾರ ನೀಡುತ್ತೇನೆ ಮತ್ತು ವಿನಂತಿಸುತ್ತೇನೆ.

**ವೈವಾಹಿಕ ಸ್ಥಿತಿ:** ☐ ವಿವಾಹಿತ ☐ ಅವಿವಾಹಿತ

**ಮದುವೆಯಾಗಿದ್ದರೆ ಸಂಗಾತಿಯ ಹೆಸರು** ☐ ಶ್ರೀ ☐ ಶ್ರೀಮತಿ

**ಸಂಗಾತಿಯ ಜನ್ಮ ದಿನಾಂಕ:** / / **ವಿವಾಹದ ದಿನಾಂಕ:** / /

**ಸಂಗಾತಿಯ ಉದ್ಯೋಗ:**

**ಉದ್ಯೋಗಸ್ಥರಾಗಿದ್ದರೆ:** ಸಂಸ್ಥೆಯ ಹೆಸರು: ಹುದ್ದೆ/ವೃತ್ತಿ:

**ಮಕ್ಕಳ ಸಂಖ್ಯೆ:** **ಮಕ್ಕಳ ವಯಸ್ಸು** (ವರ್ಷಗಳಲ್ಲಿ): M1 ವರ್ಷಗಳು M2 ವರ್ಷಗಳು F1 ವರ್ಷಗಳು F2 ವರ್ಷಗಳು

| (a) ತಿಂಗಳ ಆದಾಯ (ಅಂದಾಜು ಮೌಲ್ಯ)<br>₹ .................................................. | (b) ತಿಂಗಳ ಖರ್ಚು (ಅಂದಾಜು ಮೌಲ್ಯ)<br>₹ .................................................. | (c) ಹೂಡಿಕೆ/ಸಾಲದ ಕಂತುಗಳಿಗೆ ಸಂಬಂಧಪಟ್ಟಂತೆ ತಿಂಗಳ ಹೊಣೆಗಾರಿಕೆಗಳು<br>₹ .................................................. |
|---|---|---|
| ಸಂಬಳ: ₹ | ಆಹಾರ/ವಸತಿ/ಬಟ್ಟೆ: ₹ | ಸಾಲದ ಕಂತು: ₹ |
| ವ್ಯವಹಾರ: ₹ | ಶಿಕ್ಷಣ: ₹ | ಸಿಡಿ/ಆರ್‌ಡಿ ₹ |
| ಬಾಡಿಗೆ ಆದಾಯ:₹ | ಆರೋಗ್ಯ: ₹ | ಎಸ್‌ಐಪಿ ₹ |
| ಇತರ ಯಾವುದಾದರೂ: ₹ | ಇತರ ಯಾವುದಾದರೂ: ₹ | ಜೀವ ವಿಮಾ ಪ್ರೀಮಿಯಂ:₹ |

| (a) ಆಸ್ತಿಗಳು (ಅಂದಾಜು ಮೌಲ್ಯ):<br>₹ .................................................. | (b) ಹೊಣೆಗಾರಿಕೆಗಳು (ಅಂದಾಜು ಮೌಲ್ಯ)<br>₹ .................................................. |
|---|---|
| ವಾಹನ ಮಾಲೀಕತ್ವ: ☐ ಕಾರು ☐ ವಾಹನ ☐ ಭೂಮಿ ಮತ್ತು ಕಟ್ಟಡ<br>ವಸತಿ ಮನೆ: ☐ ಹಿರಿಯರದ್ದು ☐ ಸ್ವಂತ ☐ ಕೃಷಿ ಆಸ್ತಿ<br>☐ ಬಾಡಿಗೆ ☐ ಉದ್ಯೋಗದಾತರು<br>ಇತರೆ ಯಾವುದಾದರೂ (ನಿರ್ದಿಷ್ಟಪಡಿಸಿ): .................................... ☐ ಅವಧಿ ಠೇವಣಿಗಳು | **ಅಸ್ತಿತ್ವದಲ್ಲಿರುವ ಸಾಲಗಳು**<br>☐ ಕಾರು ಸಾಲ ☐ ಗೃಹ ಸಾಲ ☐ ವೈಯಕ್ತಿಕ ಸಾಲ<br>☐ ಶಿಕ್ಷಣ ಸಾಲ ☐ ವ್ಯಾಪಾರ/ಕೃಷಿ<br>ಇತರ (ಸೂಚಿಸಿ) .................................................. |

**ಜೀವ ವಿಮಾ ಪಾಲಿಸಿಯನ್ನು ಹೊಂದಿರುವಿರೆ?** ☐ ಹೌದು ☐ ಇಲ್ಲ

**ಜೀವ ವಿಮಾ ಮೌಲ್ಯ (ವಿಮಾ ಮೊತ್ತ):** ☐ ₹2 ಲಕ್ಷದವರೆಗೆ ☐ ₹5 ಲಕ್ಷದವರೆಗೆ ☐ ₹5 ಲಕ್ಷಕ್ಕಿಂತ ಹೆಚ್ಚು

**ಜೀವ ವಿಮೆ ಒದಗಿಸಿದವರು:** ☐ ಎಲ್‌ಐಸಿ ☐ ಪಿಎನ್‌ಬಿ ಮೆಟ್ಲೈಫ್ ☐ ಇತರೆ (ನಿರ್ದಿಷ್ಟಪಡಿಸಿ)

**ಹೊಂದಿರುವ ಮೆಡಿಕ್ಲೇಮ್/ಆರೋಗ್ಯ ವಿಮೆ** ☐ ಹೌದು ☐ ಇಲ್ಲ

**ಮ್ಯೂಚುಯಲ್ ಫಂಡ್‌ಗಳು** ☐ ಟಾಟಾ ☐ ಫ್ರಾಂಕ್ಲಿನ್ ಟೆಂಪಲ್ಟನ್ ☐ ರಿಲಾಯನ್ಸ್ ☐ ಐಸಿಐಸಿಐ ☐ ಇತರ (ಸೂಚಿಸಿ)

ನಿಮ್ಮ ವಿಶ್ವಾಸಿ.

ಸಹಿ

- - - - - - - - - - - - - - - - - - - - - - - - - - - - - - - -

## ಉಳಿತಾಯ ಬ್ಯಾಂಕ್ ಖಾತೆಗಳ ಪ್ರಮುಖ ನಿಯಮ ಮತ್ತು ಷರತ್ತುಗಳು (ಎಂಐಟಿಸಿ)

**'ನಿಮ್ಮ ಗ್ರಾಹಕರನ್ನು ತಿಳಿದುಕೊಳ್ಳಿ' ಮಾರ್ಗಸೂಚಿಗಳು**

ಖಾತೆ ತೆರೆಯಲು ಬೇಕಾದ ಆವಶ್ಯಕತೆಗಳನ್ನು ಪೂರೈಸಿದ ಯಾವುದೇ ವ್ಯಕ್ತಿ ಉಳಿತಾಯ ಖಾತೆ ತೆರೆಯಲು ಬ್ಯಾಂಕ್‌ಗೆ ಅಗತ್ಯವಿರುವ ಗುರುತಿನ ಮತ್ತು ವಿಳಾಸದ ಪುರಾವೆ ಒದಗಿಸಿದಲ್ಲಿ ಆತ ಸೂಚಿತ ನಿಯಮಗಳನ್ನು ಅನುಸರಿಸಲು ಒಪ್ಪಿದಂತೆ.

| ಅಧಿಕೃತವಾಗಿ ಮಾನ್ಯವಾಗುವ ದಾಖಲೆಗಳು | |
|---|---|
| **ಗುರುತಿನ ಪುರಾವೆ** | **ವಿಳಾಸದ ಪುರಾವೆ** |
| i) ಪಾಸ್ ಪೋರ್ಟ್<br>ii) ಚಾಲನಾ ಪರವಾನಗಿ<br>iii) ಪ್ಯಾನ್ ಕಾರ್ಡ್<br>iv) ಮತದಾರರ ಗುರುತಿನ ಚೀಟಿ<br>v) ಹೆಸರು, ವಿಳಾಸ ಮತ್ತು ಆಧಾರ್ ಸಂಖ್ಯೆಯ ವಿವರಗಳನ್ನು ಒಳಗೊಂಡ ಯುಐಡಿಎಐ ನೀಡಿರುವ ಆಧಾರ್ ಕಾರ್ಡ್/ಪತ್ರ<br>vi) ರಾಜ್ಯ ಸರ್ಕಾರದ ಅಧಿಕಾರಿ ಸರಿಯಾಗಿ ಸಹಿ ಮಾಡಿರುವ ನರೇಗಾ ನೀಡಿದ ಜಾಬ್ ಕಾರ್ಡ್ | i) ಪಾಸ್ ಪೋರ್ಟ್<br>ii) ಚಾಲನಾ ಪರವಾನಗಿ<br>iii) ಮತದಾರರ ಗುರುತಿನ ಚೀಟಿ<br>iv) ಹೆಸರು, ವಿಳಾಸ ಮತ್ತು ಆಧಾರ್ ಸಂಖ್ಯೆಯ ವಿವರಗಳನ್ನು ಒಳಗೊಂಡ ಯುಐಡಿಎಐ ನೀಡಿರುವ ಆಧಾರ್ ಕಾರ್ಡ್/ಪತ್ರ<br>v) ರಾಜ್ಯ ಸರ್ಕಾರದ ಅಧಿಕಾರಿ ಸರಿಯಾಗಿ ಸಹಿ ಮಾಡಿರುವ ನರೇಗಾ ನೀಡಿದ ಜಾಬ್ ಕಾರ್ಡ್ |

ಮೇಲಿನ ದಾಖಲೆಗಳ ಅನುಪಸ್ಥಿತಿಯಲ್ಲಿ, ಕನಿಷ್ಠ ಅಪಾಯದ ಗ್ರಾಹಕರಿಗೆ 'ಸರಳೀಕೃತ ಕ್ರಮಗಳ' ಅಡಿಯಲ್ಲಿ ಇತರ ಸ್ವೀಕಾರಾರ್ಹ ದಾಖಲೆಗಳ ಬಗ್ಗೆ ತಿಳಿಯಲು ದಯವಿಟ್ಟು ಬ್ಯಾಂಕ್ ಅಧಿಕಾರಿಗಳನ್ನು ಸಂಪರ್ಕಿಸಿ.

### ನಾಮನಿರ್ದೇಶನ ಮತ್ತು ಸರ್ವೈವರ್‌ಶಿಪ್ ಸೌಲಭ್ಯ

ನಾಮನಿರ್ದೇಶನ ಸೌಲಭ್ಯವು ಉಳಿತಾಯ ಬ್ಯಾಂಕ್ ಖಾತೆಗಳಲ್ಲಿ ಲಭ್ಯವಿದೆ ಮತ್ತು ಅನಿರೀಕ್ಷಿತ ಸಂದರ್ಭಗಳಲ್ಲಿ ಕಾನೂನುಬದ್ಧ ವಾರಸುದಾರರಿಗೆ ಹಕ್ಕನ್ನು ಸುಗಮವಾಗಿ ಇತ್ಯರ್ಥಗೊಳಿಸಲು ಖಾತೆದಾರರಿಗೆ ಈ ಸೌಲಭ್ಯವನ್ನು ಪಡೆಯಲು ಸೂಚಿಸಲಾಗಿದೆ. ನಾಮನಿರ್ದೇಶನವನ್ನು ಕೇವಲ ಒಬ್ಬ ನಾಮಾಂಕಿತ ವ್ಯಕ್ತಿಯ ಪರವಾಗಿ ಮಾಡಬಹುದು. ಒಂದು ವೇಳೆ ಅವರು ನಾಮನಿರ್ದೇಶನ ಮಾಡಲು ಇಚ್ಛಿಸದಿದ್ದಲ್ಲಿ, ಖಾತೆ ತೆರೆಯುವ ಅರ್ಜಿ ನಮೂನೆಯಲ್ಲಿ ಪೂರ್ಣ ಸಹಿಯೊಂದಿಗೆ ದಾಖಲಿಸಬೇಕು. ಅಂತಹ ಸಂದರ್ಭಗಳಲ್ಲಿ ಜಂಟಿ ಖಾತೆಯನ್ನು ತೆರೆದರೆ ಸರ್ವೈವರ್ ಶಿಪ್ ಪ್ರಯೋಜನದೊಂದಿಗೆ ಜೀವಿತ ಇರುವವರು ನಿರ್ವಹಿಸಬಹುದು.

### ಖಾತೆಗಳ ಪ್ರಕಾರಗಳು, ಕನಿಷ್ಠ ಮೊತ್ತ, ಷರತ್ತು ಮತ್ತು ಸೇವಾ ಶುಲ್ಕಗಳು

ಅರ್ಜಿದಾರರು ಚೆಕ್ ಪುಸ್ತಕದ ಸೌಲಭ್ಯದೊಂದಿಗೆ ಅಥವಾ ಚೆಕ್ ಪುಸ್ತಕ ಇಲ್ಲದೆ ಖಾತೆಯನ್ನು ತೆರೆಯಬಹುದು. ಈ ಖಾತೆ ಪ್ರಕಾರಗಳಿಗೆ ಸೂಚಿಸಲಾದ ಪ್ರಸ್ತುತ ಕನಿಷ್ಠ ಮಾಸಿಕ ಸರಾಸರಿ ಮೊತ್ತಗಳು ಮತ್ತು ಕನಿಷ್ಠ ಮೊತ್ತವನ್ನು ನಿರ್ವಹಿಸದಿದ್ದರೆ ವಿಧಿಸಲಾಗುವ ಶುಲ್ಕಗಳು ಬ್ಯಾಂಕಿನ ವೆಬ್‌ಸೈಟ್ www.karnatakabank.comನಲ್ಲಿ ಲಭ್ಯವಿವೆ. ಮಾಹಿತಿಯನ್ನು ಶಾಖೆಗಳಿಂದಲೂ ಪಡೆಯಬಹುದು. ಉಳಿತಾಯ ಬ್ಯಾಂಕ್ ಖಾತೆಯಲ್ಲಿ ಗರಿಷ್ಠ ಮೊತ್ತಕ್ಕೆ ಯಾವುದೇ ಮಿತಿಯಿಲ್ಲ.

### ಖಾತೆ ತೆರೆಯುವುದು ಹೇಗೆ?

ಸಾಮಾನ್ಯವಾಗಿ, ಖಾತೆ ತೆರೆಯುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಅರ್ಜಿದಾರರು ವೈಯಕ್ತಿಕವಾಗಿ ಬ್ಯಾಂಕಿಗೆ ಹಾಜರಾಗಬೇಕು. ಅರ್ಜಿದಾರರು ನಿಗದಿತ ಅರ್ಜಿ ನಮೂನೆಯನ್ನು ಸರಿಯಾಗಿ ಭರ್ತಿ ಮಾಡಿ ಸಹಿ ಮಾಡಬೇಕು ಮತ್ತು ಆತನ/ಆಕೆಯ/ ಅವರ ಇತ್ತೀಚೆಗೆ ತೆಗೆಯಲಾದ ಪಾಸ್‌ಪೋರ್ಟ್‌ಗಾತ್ರದ ಭಾವಾಚಿತ್ರಗಳ ಎರಡು ಪ್ರತಿಗಳನ್ನು ಸಲ್ಲಿಸಬೇಕು. ಖಾತೆದಾರರ ಸಹಿಗಳು ಸ್ಪಷ್ಟವಾಗಿರಬೇಕು ಮತ್ತು ಸಹಿಗಳು ಇಂಗ್ಲೀಷಿನ ದೊಡ್ಡಕ್ಷರ ಅಥವಾ ದಪ್ಪಕ್ಷರಗಳಲ್ಲಿ ಇರಬಾರದು. ಪ್ರತಿ ಖಾತೆಗೆ ವಿಶಿಷ್ಟ ಖಾತೆ ಸಂಖ್ಯೆಯನ್ನು ನೀಡಲಾಗುವುದು. ಬ್ಯಾಂಕಿನೊಂದಿಗೆ ವ್ಯವಹರಿಸುವಾಗ, ಈ ಸಂಖ್ಯೆಯನ್ನು ಖಾತೆದಾರರು ತಪ್ಪದೆ ಉಲ್ಲೇಖಿಸಬೇಕು. ಖಾತೆದಾರರು ತಮ್ಮ ಸ್ವಹಿತಾಸಕ್ತಿಯಲ್ಲಿ, ಖಾತೆಗಳನ್ನು ನಿರ್ವಹಿಸುವಾಗ ಮತ್ತು ಬ್ಯಾಂಕಿನೊಂದಿಗೆ ಯಾವುದೇ ಪತ್ರವ್ಯವಹಾರವನ್ನು ನಡೆಸುವಾಗ ಬ್ಯಾಂಕಿನಲ್ಲಿ ದಾಖಲಿಸಲಾಗಿರುವ ಮಾದರಿಯ ಪ್ರಕಾರವೇ ಇರುವಂತೆ ಏಕರೂಪದ ಸಹಿಗೆ ಬದ್ಧರಾಗಬೇಕು.

### ಪಾಸ್ ಪುಸ್ತಕ/ಖಾತಾ ವರದಿ/ಇ-ವರದಿಗಳು

ಖಾತೆದಾರರಿಗೆ ಒದಗಿಸಲಾದ ಪಾಸ್ ಪುಸ್ತಕ ಮತ್ತು ಚೆಕ್ ಪುಸ್ತಕವನ್ನು ಸುರಕ್ಷಿತ ಸ್ಥಳದಲ್ಲಿ ಇಡಬೇಕು. ಈ ವಿಷಯದಲ್ಲಿ ಖಾತೆದಾರರ ನಿರ್ಲಕ್ಷ್ಯದಿಂದಾಗಿ ಯಾವುದೇ ನಷ್ಟ ಉಂಟಾದರೆ ಅಥವಾ ತಪ್ಪಾದ ಪಾವತಿಗೆ ಕಾರಣವಾದರೆ ಬ್ಯಾಂಕ್ ಜವಾಬ್ದಾರನಾಗಿರುವುದಿಲ್ಲ. ವಿದ್‌ಡ್ರಾವಲ್ ಫಾರ್ಮ್ ಮೂಲಕ ಖಾತೆಯಲ್ಲಿರುವ ಹಣವನ್ನು ಹಿಂಪಡೆಯಲು, ಪಾಸ್ ಪುಸ್ತಕವನ್ನು ಪ್ರಸ್ತುತಪಡಿಸಬೇಕು. ಚೆಕ್ ಹಾಳೆಗಳು ಮತ್ತು ಡೆಬಿಟ್ ಕಾರ್ಡ್‌ನ್ನು ಬಳಸಿ ಪಾಸ್ ಪುಸ್ತಕ ಇಲ್ಲದೆಯೇ ಖಾತೆಯಿಂದ ಹಣವನ್ನು ಹಿಂಪಡೆದುಕೊಳ್ಳಬಹುದು. ಹಿಂದಿನ ವಹಿವಾಟನ್ನು ಪಾಸ್ ಪುಸ್ತಕದಲ್ಲಿ ಮುದ್ರಿಸದೆಯೇ ಠೇವಣಿಗಳನ್ನು ಮಾಡಬಹುದು. ಒಂದು ವಾರದೊಳಗೆ ಅದನ್ನು ಪಡೆದುಕೊಳ್ಳದಿದ್ದಲ್ಲಿ, ಅದನ್ನು ನೋಂದಾಯಿತ ಎ.ಡಿ. ಅಂಚೆಯಲ್ಲಿ/ಕೊರಿಯರ್ ಮೂಲಕ ಅವರ ವಿಳಾಸದಲ್ಲಿ ಅವರಿಗೆ ಹಿಂದಿರುಗಿಸಲಾಗುತ್ತದೆ. ಖಾತೆದಾರರು ತಮ್ಮ ಪಾಸ್ ಪುಸ್ತಕಗಳಲ್ಲಿ ಮುದ್ರಿತ ವಿವರಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕು ಮತ್ತು ಯಾವುದಾದರೂ ಲೋಪ ದೋಷಗಳು ಇದ್ದರೆ ಆ ಬಗ್ಗೆ ಬ್ಯಾಂಕಿನ ಗಮನವನ್ನು ಸೆಳೆಯಬೇಕು.

ಕಳೆದುಹೋದ ಅಥವಾ ಹಾಳಾದ ಪಾಸ್ ಪುಸ್ತಕಗಳಿಗೆ ಬದಲಾಗಿ ಅಗತ್ಯ ವಿಚಾರಣೆಯ ನಂತರ ಖಾತೆದಾರರಿಂದ ಲಿಖಿತ ವಿನಂತಿಯನ್ನು ಸ್ವೀಕರಿಸಿ, ಔಪಚಾರಿಕತೆಗಳನ್ನು ಪೂರ್ಣಗೊಳಿಸಿ ಮತ್ತು ನಿಗದಿತ ಶುಲ್ಕಗಳನ್ನು ಪಡೆದ ನಂತರ ಪಾಸ್ ಪುಸ್ತಕದ ನಕಲು ಪ್ರತಿಯನ್ನು ನೀಡಬಹುದು. ಇದಕ್ಕಾಗಿ ಪ್ರಸ್ತುತ ಸೂಚಿಸಲಾದ ಶುಲ್ಕಗಳು ಬ್ಯಾಂಕಿನ ವೆಬ್‌ಸೈಟ್ www.karnatakabank.comನಲ್ಲಿ ಲಭ್ಯವಿದೆ. ಈ ಮಾಹಿತಿಯನ್ನು ಶಾಖೆಗಳಿಂದಲೂ ಪಡೆಯಬಹುದು.

ಖಾತೆದಾರರಿಗೆ ಅವರ ನಿರ್ದಿಷ್ಟ ಕೋರಿಕೆಯ ಮೇರೆಗೆ ಮಾಸಿಕ ಖಾತಾವರದಿ/ಇ-ವರದಿಯನ್ನು ಸಹ ಬ್ಯಾಂಕ್ ಒದಗಿಸುತ್ತದೆ

### ಚೆಕ್ ಪುಸ್ತಕ ಮತ್ತು ಚೆಕ್ ವಾಪಾಸಾತಿ ಶುಲ್ಕಗಳು

ಖಾತೆ ತೆರೆಯಲು ಸಂಬಂಧಿಸಿದಂತೆ ಎಲ್ಲಾ ಔಪಚಾರಿಕತೆಗಳನ್ನು ಪೂರ್ಣಗೊಳಿಸಿದ ನಂತರ ಬ್ಯಾಂಕ್ ಮೊದಲ ಚೆಕ್ ಪುಸ್ತಕವನ್ನು ನೀಡುತ್ತದೆ. ಕ್ಯಾಲೆಂಡರ್ ವರ್ಷದಲ್ಲಿ ಐವತ್ತು ಚೆಕ್ ಹಾಳೆಗಳನ್ನು ವಿತರಿಸಲು ಯಾವುದೇ ಶುಲ್ಕವನ್ನು ವಿಧಿಸಲಾಗುವುದಿಲ್ಲ ಅದರ ನಂತರ, ಗ್ರಾಹಕರ ಖಾತೆಗೆ ಸೇವಾ ಶುಲ್ಕವನ್ನು ವಿಧಿಸಲಾಗುತ್ತದೆ. ಇದಕ್ಕಾಗಿ ಪ್ರಸ್ತುತ ಸೂಚಿಸಲಾದ ಶುಲ್ಕಗಳು ಬ್ಯಾಂಕಿನ ವೆಬ್‌ಸೈಟ್ www.karnatakabank.comನಲ್ಲಿ ಲಭ್ಯವಿದೆ. ಈ ಮಾಹಿತಿಯನ್ನು ಶಾಖೆಗಳಿಂದಲೂ ಪಡೆಯಬಹುದು. ಖಾತೆದಾರರು ಬ್ಯಾಂಕ್ ನೀಡಿರುವ ಚೆಕ್ ಪುಸ್ತಕದ ಚೆಕ್‌ಹಾಳೆಗಳನ್ನು ಮಾತ್ರ ಬಳಸಬೇಕು. ಇಲ್ಲದಿದ್ದರೆ ಯಾವುದೇ ಚೆಕ್‌ನ ಪಾವತಿಯನ್ನು ನಿರಾಕರಿಸುವ ಹಕ್ಕನ್ನು ಬ್ಯಾಂಕ್ ಹೊಂದಿದೆ. ಸಾಮಾನ್ಯವಾಗಿ, ಈ ಹಿಂದೆ ನೀಡಲಾದ ಎಲ್ಲಾ ಅಥವಾ ಬಹುತೇಕ ಎಲ್ಲಾ ಚೆಕ್ ಹಾಳೆಗಳು ಖಾಲಿಯಾಗುವ ಮುನ್ನ ಬ್ಯಾಂಕ್ ಏಕಕಾಲಕ್ಕೆ ಒಂದಕ್ಕಿಂತ ಹೆಚ್ಚು ಚೆಕ್ ಪುಸ್ತಕಗಳನ್ನು ನೀಡುವುದಿಲ್ಲ. ಚೆಕ್ ಅನ್ನು ಸ್ಪಷ್ಟವಾಗಿ ಬರೆಯಬೇಕು. ನೀಡಲಾದ ಅಥವಾ ಕಳೆದುಹೋದ ಚೆಕ್ಕುಗಳಿಗೆ ಸಂಬಂಧಿಸಿದಂತೆ ಪಾವತಿಯನ್ನು ನಿಲ್ಲಿಸುವ ವಿನಂತಿಯನ್ನು ಬ್ಯಾಂಕಿನಲ್ಲಿ ನಿಗದಿತ ಸೇವಾ ಶುಲ್ಕವನ್ನು ಪಾವತಿಸಿ ನೋಂದಾಯಿಸಬಹುದು. ಚೆಕ್ ವಾಪಾಸಾದಾಗಲೆಲ್ಲಾ, ನಿಗದಿತ ಚೆಕ್ ವಾಪಾಸಾತಿ ಶುಲ್ಕವನ್ನು ವಿಧಿಸಲಾಗುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ನಿಗದಿತ ಶುಲ್ಕಗಳು ಬ್ಯಾಂಕಿನ ವೆಬ್‌ಸೈಟ್ www.karnatakabank.comನಲ್ಲಿ ಲಭ್ಯವಿದೆ ಅಥವಾ ಈ ಕುರಿತು ಮಾಹಿತಿಯನ್ನು ಶಾಖೆಗಳಿಂದಲೂ ಪಡೆಯಬಹುದು.

### ಠೇವಣಿಗಳಿಗೆ ವಿಮಾ ರಕ್ಷಣೆ

ಕೆಲವು ಮಿತಿ ಮತ್ತು ಷರತ್ತುಗಳಿಗೆ ಒಳಪಟ್ಟು ಎಲ್ಲಾ ಬ್ಯಾಂಕ್ ಠೇವಣಿಗಳನ್ನು ಠೇವಣಿ ವಿಮೆ ಮತ್ತು ಡೆಪಾಸಿಟ್ ಇನ್ಶೂರೆನ್ಸ್ ಕ್ರೆಡಿಟ್ ಗ್ಯಾರಂಟಿ ಕಾರ್ಪೋರೇಷನ್ ಆಫ್ ಇಂಡಿಯಾ (ಡಿಐಜಿಸಿ) ನೀಡುವ ವಿಮಾ ಯೋಜನೆಗೆ ಒಳಪಡಿಸಲಾಗುತ್ತದೆ. ಜಾರಿಯಲ್ಲಿರುವ ವಿಮಾ ರಕ್ಷಣೆಯ ವಿವರಗಳು ಠೇವಣಿದಾರರಿಗೆ ಲಭ್ಯವಾಗುವಂತೆ ನೋಡಿಕೊಳ್ಳಲಾಗುತ್ತದೆ.

### ನಿಯಮಗಳಲ್ಲಿ ಬದಲಾವಣೆ

ಈ ಯಾವುದೇ ನಿಯಮ ಮತ್ತು ಸೇವಾ ಶುಲ್ಕಗಳನ್ನು ಬದಲಾಯಿಸುವ, ಅಳಿಸುವ ಅಥವಾ ಸೇರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ, ಇದನ್ನು ಗ್ರಾಹಕರಿಗೆ ಬ್ಯಾಂಕಿನ ವೆಬ್‌ಸೈಟ್ ಅಥವಾ ಶಾಖೆಯ ಸೂಚನಾ ಫಲಕದಲ್ಲಿ/ ಎಸ್‌ಎಂಎಸ್/ ಇ-ಮೇಲ್ ಸಂದೇಶದ ಮೂಲಕ ಯುಕ್ತರೀತಿಯಲ್ಲಿ ತಿಳಿಸಲಾಗುತ್ತದೆ.

### ಪ್ರಕಟಣೆ:

ಕಾನೂನು, ನಿಯಮ ಮತ್ತು ನಿಬಂಧನೆಗಳಿಗೆ ಅನುಸಾರವಾಗಿ ಅಥವಾ ಯಾವುದೇ ಸಾರ್ವಜನಿಕ ಅಥವಾ ನಿಯಂತ್ರಣ ಪ್ರಾಧಿಕಾರದ ಕೋರಿಕೆಯ ಮೇರೆಗೆ ಅಥವಾ ಬಹಿರಂಗಪಡಿಸುವಿಕೆಯಿಂದ ವಂಚನೆಗಳನ್ನು ತಡೆಗಟ್ಟಬಹುದೆಂದಾದಲ್ಲಿ ಅಥವಾ ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ, ಖಾತೆದಾರರ ನಿರ್ದಿಷ್ಟ ಒಪ್ಪಿಗೆಯನ್ನು ಪಡೆಯದೆಯೇ ಗ್ರಾಹಕರ ಖಾತೆಯ ಬಗ್ಗೆ ಮಾಹಿತಿಯನ್ನು ಬ್ಯಾಂಕ್ ಬಹಿರಂಗಪಡಿಸಬಹುದು.

ಬದ್ಧತೆಗಳ ಸಂಹಿತೆ ಮತ್ತು ಕುಂದುಕೊರತೆ ಪರಿಹಾರ ನೀತಿ ಸೇರಿದಂತೆ ಎಲ್ಲಾ ಸಂಬಂಧಿತ ನೀತಿಗಳು ಗ್ರಾಹಕರಿಗೆ ಶಾಖೆಗಳಲ್ಲಿ ಲಭ್ಯವಿದೆ.

## ಖಾತೆಯಲ್ಲಿನ ವ್ಯವಹಾರಗಳು

### ಸಾಮಾನ್ಯ

ಉಳಿತಾಯವನ್ನು ಹೆಚ್ಚಿಸಲು ಉಳಿತಾಯ ಬ್ಯಾಂಕ್ ಖಾತೆಯು ಅತ್ಯಗತ್ಯ ಸೌಲಭ್ಯವಾಗಿದೆ ಮತ್ತು ಆದ್ದರಿಂದ ವ್ಯಾಪಾರ/ವಾಣಿಜ್ಯ ವಹಿವಾಟುಗಳನ್ನು ನಡೆಸಲು ಆ ಖಾತೆಯನ್ನು ಬಳಸಬಾರದು. ಖಾತೆದಾರನು ಅವಳ/ಅವನ ಖಾತೆಯನ್ನು ಸಲ್ಲದ ಉದ್ದೇಶಕ್ಕಾಗಿ ಬಳಸಿದ್ದಾನೆಂದು ಅರಿವಾದರೆ ಬ್ಯಾಂಕ್ ಖಾತೆಯನ್ನು ಮುಚ್ಚಬಹುದು.

### ಠೇವಣಿಗಳು

ಖಾತೆಗೆ ಮಾಡಬಹುದಾದ ಠೇವಣಿಗಳ ಸಂಖ್ಯೆಗೆ ಯಾವುದೇ ನಿರ್ಬಂಧವಿಲ್ಲ. ರೂ 10/– ಕ್ಕಿಂತ ಕಡಿಮೆ ಹಣದಲ್ಲಿ ಯಾವುದೇ ಠೇವಣಿ ಸ್ವೀಕರಿಸಲಾಗುವುದಿಲ್ಲ. ಗ್ರಾಹಕರು ತಮ್ಮ ಖಾತೆಗಳಿಗೆ ಮೂಲ ಶಾಖೆ/ಮೂಲೇತರ ಶಾಖೆ/ನಗದು ಠೇವಣಿ ಯಂತ್ರದ [ಎಲ್ಲಿಯೇ ಸ್ಥಾಪಿಸಿದ್ದರೂ] ಮೂಲಕ ಹಣವನ್ನು ಠೇವಣಿ ಮಾಡಬಹುದು. ಕೇವಲ ಖಾತೆದಾರರ ಪರವಾಗಿ ಬರೆಯಲಾದ ಚೆಕ್‌ಗಳು, ಡ್ರಾಫ್ಟ್‌ಗಳು ಅಥವಾ ಇತರ ಇನ್‌ಸ್ಟ್ರುಮೆಂಟ್‌ಗಳನ್ನು ಖಾತೆಗೆ ಭರ್ತಿ ಮಾಡಲು ಸ್ವೀಕರಿಸಲಾಗುತ್ತದೆ. ಖಾತೆದಾರರ ಪರವಾಗಿ ಅನುಮೋದಿಸಲಾದ ಮೂರನೇ ವ್ಯಕ್ತಿಯ ಇನ್‌ಸ್ಟ್ರುಮೆಂಟ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಸ್ವೀಕರಿಸಿದ ಇನ್‌ಸ್ಟ್ರುಮೆಂಟ್‌ಗಳು ನಗದಾಗಿ ಖಾತೆಗೆ ಬರುವ ಮುನ್ನ ನಗದು ಹಿಂಪಡೆಯುವಿಕೆಯನ್ನು ಅನುಮತಿಸಲಾಗುವುದಿಲ್ಲ. ತೃಪ್ತಿಕರವಾದ ಖಾತೆಗಳಲ್ಲಿ, ರೂ 15,000/– ವರೆಗಿನ ಮೊತ್ತದ ಬಾಹ್ಯ ಇನ್‌ಸ್ಟ್ರುಮೆಂಟ್‌ಗಳಿಗೆ ತಕ್ಷಣವೇ ಖಾತೆಗೆ ಪಾವತಿ ಸೌಲಭ್ಯ ನೀಡಲಾಗುವುದು ಮತ್ತು ಅದು ಕಾಲಕಾಲಕ್ಕೆ ಬದಲಾಗಬಹುದು. ಬಾಹ್ಯ ಚೆಕ್‌ಗಳ ಸಂಗ್ರಹಕ್ಕೆ ಇನ್‌ಸ್ಟ್ರುಮೆಂಟ್ ಶುಲ್ಕವನ್ನು ಖಾತೆಯಿಂದ ಕಳೆಯಲಾಗುತ್ತದೆ ಇದಕ್ಕಾಗಿ ಪ್ರಸ್ತುತ ನಿಗದಿಪಡಿಸಿದ ಮಿತಿ ಮತ್ತು ಶುಲ್ಕಗಳು ಬ್ಯಾಂಕಿನ ವೆಬ್‌ಸೈಟ್ www.karnatakabank.comನಲ್ಲಿ ಲಭ್ಯವಿದೆ. ಈ ಮಾಹಿತಿಯನ್ನು ಶಾಖೆಗಳಿಂದಲೂ ಪಡೆಯಬಹುದು. ತರುವಾಯ ಪಾವತಿಯಾಗದೆ ಹಿಂತಿರುಗಿದ ಚೆಕ್‌ಗಳ ಮೇಲೆ ಬಾಕಿ ಬಡ್ಡಿಯನ್ನು ವಿಧಿಸಲಾಗುತ್ತದೆ.

### ಹಿಂಪಡೆಯುವಿಕೆ

ಬ್ಯಾಂಕಿನ ಪ್ರಮಾಣಿತ ವಿಥ್‌ಡ್ರಾವಲ್ ನಮೂನೆಯನ್ನು ಬಳಸಿಕೊಂಡು ಖಾತೆದಾರನು ತನ್ನ ಸಾಮಾನ್ಯ ಉಳಿತಾಯ ಬ್ಯಾಂಕ್ ಖಾತೆಯಿಂದ ವೈಯಕ್ತಿಕವಾಗಿ ಹಣವನ್ನು ಹಿಂಪಡೆಯಬಹುದು. ಹಿಂಪಡೆಯುವ ನಮೂನೆಯೊಂದಿಗೆ ಪಾಸ್ ಪುಸ್ತಕವೂ ಇರಬೇಕು. ಈ ನಮೂನೆಯನ್ನು ಖಾತೆದಾರರು ಸ್ವತಃ ತಮ್ಮ ಖಾತೆಗೆ ಬಂದ ಪಾವತಿಗಳನ್ನು ಸ್ವೀಕರಿಸಲು ಮಾತ್ರ ಬಳಸಬಹುದು. ಎಟಿಎಂ–ಕಮ್–ಡೆಬಿಟ್ ಕಾರ್ಡ್ ಅನ್ನು ಎಟಿಎಂಗಳಲ್ಲಿ ಹಣವನ್ನು ಹಿಂಪಡೆಯಲು ಸಹ ಬಳಸಬಹುದು. ಖಾತೆದಾರನು ರೂ 100/– ಕ್ಕಿಂತ ಕಡಿಮೆ ಮೊತ್ತವನ್ನು ಹಿಂಪಡೆಯಲು ಸಾಧ್ಯವಿಲ್ಲ. ಎಲ್ಲಾ ಹಿಂಪಡೆಯುವಿಕೆಗಳು ರೂ 1 ಮತ್ತು ಅದರ ಗುಣಕಗಳಲ್ಲಿ ಮಾತ್ರ ಇರಬೇಕು.

ವಿಥ್‌ಡ್ರಾವಲ್ ನಮೂನೆಗಳ ಮೂಲಕ ಮೂರನೇ ವ್ಯಕ್ತಿಗೆ ನಗದನ್ನು ಪಾವತಿಸಲು ಅನುಮತಿಯಿಲ್ಲ. ಪ್ರತಿ ಚೆಕ್ ನಮೂನೆಗೆ ಅನುಮತಿಸಲಾದ ಕನಿಷ್ಠ ಹಿಂಪಡೆಯುವಿಕೆಯನ್ನು ರೂ 50/– ಕ್ಕೆ ಸೀಮಿತಗೊಳಿಸಲಾಗಿದೆ. ಒಂದೇ ಚೆಕ್ ಮೂಲಕ ಪಡೆಯಬಹುದಾದ ಗರಿಷ್ಠ ಮೊತ್ತಕ್ಕೆ ಯಾವುದೇ ಮಿತಿ ಇಲ್ಲ. ಕರ್ನಾಟಕ ಬ್ಯಾಂಕ್ ಎಟಿಎಂಗಳು, ಇಂಟರ್ನೆಟ್ ಬ್ಯಾಂಕಿಂಗ್ ಮತ್ತು ಮೊಬೈಲ್ ಬ್ಯಾಂಕಿಂಗ್‌ನಂತಹ ಪರ್ಯಾಯ ವಿಧಾನಗಳ ಮೂಲಕ ನಡೆಸಲಾಗುವ ವಹಿವಾಟುಗಳನ್ನು ಹೊರತುಪಡಿಸಿ, ಖಾತೆಯಲ್ಲಿ ಗರಿಷ್ಠವೆಂದರೆ ಅರ್ಧ ವರ್ಷಕ್ಕೆ 50 ಡೆಬಿಟ್ ನಮೂದುಗಳು ಇರಬಹುದು ಅಥವಾ ಕಾಲಕಾಲಕ್ಕೆ ಬ್ಯಾಂಕ್‌ನ ನಿರ್ಧಾರಕ್ಕೆ ಒಳಪಡುತ್ತದೆ. ಈ ಮಿತಿಯನ್ನು ಮೀರಿದಾಗ ಅನ್ವಯವಾಗುವ ನಿಗದಿಪಡಿಸಿದ ಶುಲ್ಕಗಳು ಬ್ಯಾಂಕಿನ ವೆಬ್‌ಸೈಟ್ www.karnatakabank.comನಲ್ಲಿ ಲಭ್ಯವಿದೆ. ಈ ಮಾಹಿತಿಯನ್ನು ಶಾಖೆಗಳಿಂದಲೂ ಪಡೆಯಬಹುದು.

### ಓವರ್‌ಡ್ರಾಫ್ಟ್ ಸೌಲಭ್ಯ

ಉಳಿತಾಯ ಬ್ಯಾಂಕ್ ಖಾತೆಗಳಲ್ಲಿ ಓವರ್‌ಡ್ರಾಫ್ಟ್ ಸೌಲಭ್ಯವನ್ನು ವಿಶೇಷ ಸಂದರ್ಭಗಳಲ್ಲಿ ಪೂರ್ವ ವ್ಯವಸ್ಥೆಗಳೊಂದಿಗೆ ಅನುಮತಿಸಬಹುದು. ಖಾತೆಯಲ್ಲಿನ ಮೊತ್ತಕ್ಕಿಂತ ಹೆಚ್ಚು ಮೊತ್ತದ ಚೆಕ್‌ಗಳನ್ನು ಪಾವತಿಸದೆ ಹಿಂತಿರುಗಿಸಲಾಗುತ್ತದೆ. ಖಾತೆಯಲ್ಲಿ ಸಾಕಷ್ಟು ಹಣ ಲಭ್ಯವಿಲ್ಲದ ಕಾರಣ ಪ್ರತಿ ಬಾರಿ ಚೆಕ್ ಪಾವತಿಯಾಗದೆ ಹಿಂತಿರುಗಿದಾಗಲೂ ಸೇವಾ ಶುಲ್ಕವನ್ನು ವಿಧಿಸಲಾಗುತ್ತದೆ. ಇದಕ್ಕಾಗಿ ಸೂಚಿಸಲಾದ ಶುಲ್ಕಗಳು ಬ್ಯಾಂಕಿನ ವೆಬ್‌ಸೈಟ್ www.karnatakabank.comನಲ್ಲಿ ಲಭ್ಯವಿದೆ. ಈ ಮಾಹಿತಿಯನ್ನು ಶಾಖೆಗಳಿಂದಲೂ ಪಡೆಯಬಹುದು.

### ಸುಪ್ತ/ನಿಷ್ಕ್ರಿಯ ಖಾತೆಗಳು

ಖಾತೆದಾರರು ತಮ್ಮ ಖಾತೆಗಳನ್ನು ನಿಯಮಿತವಾಗಿ ನಿರ್ವಹಿಸಲು ಸೂಚಿಸಲಾಗುತ್ತದೆ. ಕೊನೆಯ ಕಾರ್ಯಾಚರಣೆಯ 24 ತಿಂಗಳ ನಿಗದಿತ ಅವಧಿಯ ನಂತರ ಕಾರ್ಯನಿರ್ವಹಿಸದ ಖಾತೆಗಳನ್ನು ನಿಷ್ಕ್ರಿಯ/ಸುಪ್ತ ಖಾತೆಗಳು ಎಂದು ವರ್ಗೀಕರಿಸಲಾಗಿದೆ. ಕೆವೈಸಿ ಮಾನದಂಡಗಳ ಕುರಿತು ಅಸ್ತಿತ್ವದಲ್ಲಿರುವ ಆರ್‌ಬಿಐ ಮಾರ್ಗಸೂಚಿಗಳ ಪ್ರಕಾರ ಗ್ರಾಹಕರು ವಿನಂತಿ ಪತ್ರ ಮತ್ತು ಇತ್ತೀಚಿನ ಕೆವೈಸಿ ದಾಖಲೆಗಳನ್ನು ನೀಡುವ ಮೂಲಕ ತಮ್ಮ ಖಾತೆಯನ್ನು ಸಕ್ರಿಯಗೊಳಿಸಬಹುದು. ನಿಷ್ಕ್ರಿಯ/ಸುಪ್ತ ಖಾತೆಯನ್ನು ಸಕ್ರಿಯಗೊಳಿಸಲು ಯಾವುದೇ ಶುಲ್ಕಗಳು ಇರುವುದಿಲ್ಲ.

### ಸ್ಥಾಯೀ ಸೂಚನೆಗಳು

ಸೇವಾ ಶುಲ್ಕವನ್ನು ಪಾವತಿಸಿ ತನ್ನ ಖಾತೆಯಿಂದ ವಿಮಾ ಪ್ರೀಮಿಯಂ, ಸದಸ್ಯತ್ವ ಶುಲ್ಕಗಳು ಇತ್ಯಾದಿಗಳನ್ನು ನಿಯತಕಾಲಿಕವಾಗಿ ಪಾವತಿಸಲು ಖಾತೆದಾರನು ಬ್ಯಾಂಕಿಗೆ ವಿನಂತಿಸಬಹುದು. ಸ್ಥಾಯಿ ಸೂಚನೆಗಾಗಿ ಪ್ರಸ್ತುತ ನಿಗದಿತ ಶುಲ್ಕಗಳು ಬ್ಯಾಂಕಿನ ವೆಬ್‌ಸೈಟ್ www.karnatakabank.comನಲ್ಲಿ ಲಭ್ಯವಿದೆ. ಈ ಮಾಹಿತಿಯನ್ನು ಶಾಖೆಗಳಿಂದಲೂ ಪಡೆಯಬಹುದು.

### ಬಡ್ಡಿ ಪಾವತಿ

ಬಡ್ಡಿಯನ್ನು ನಿಗದಿತ ದರದಲ್ಲಿ ದೈನಂದಿನ ಉತ್ಪನ್ನದ ಆಧಾರದ ಮೇಲೆ ಲೆಕ್ಕಹಾಕಲಾಗುತ್ತದೆ ಮತ್ತು ನಿಗದಿತ ದರದಲ್ಲಿ ತ್ರೈಮಾಸಿಕವಾಗಿ ಜಮಾ ಮಾಡಲಾಗುತ್ತದೆ. ರೂ 1/– ಅಥವಾ ಅದಕ್ಕಿಂತ ಹೆಚ್ಚಿರುವ ಬಡ್ಡಿ ಮೊತ್ತವನ್ನು ಖಾತೆಗೆ ಜಮಾ ಮಾಡಲಾಗುವುದು ಮತ್ತು 50 ಪೈಸೆಗಿಂತ ಕೆಳಗಿನ ಮೊತ್ತವನ್ನು ನಿರ್ಲಕ್ಷಿಸಲಾಗುವುದು ಮತ್ತು ಪೈಸೆ ರೂಪದಲ್ಲಿರುವ ಮೊತ್ತವು 50 ಪೈಸೆಗಿಂತ ಹೆಚ್ಚಿದ್ದರೆ ಅದನ್ನು ಹತ್ತಿರದ ರೂಪಾಯಿಗೆ ಸರಿದೂಗಿಸಲಾಗುವುದು.

### ಕನಿಷ್ಠ ಮೊತ್ತ ನಿರ್ವಹಣೆ ಮತ್ತು ಕನಿಷ್ಠ ಮೊತ್ತ ನಿರ್ವಹಿಸದಿರುವುದಕ್ಕೆ ಶುಲ್ಕಗಳು

ಉಳಿತಾಯ ಬ್ಯಾಂಕ್ ಖಾತೆಗಳನ್ನು ಹೊಂದಿರುವ ಗ್ರಾಹಕರು ತಮ್ಮ ಖಾತೆಯನ್ನು ಯಾವ ಯೋಜನೆಯಡಿಯಲ್ಲಿ ತೆರೆದಿದ್ದಾರೆಯೋ ಆ ಖಾತೆ ಯೋಜನೆಗಳ ಪ್ರಕಾರ ತಮ್ಮ ಖಾತೆಗಳಲ್ಲಿ ನಿಗದಿತ ಕನಿಷ್ಠ ಮೊತ್ತವನ್ನು ಕಾಯ್ದುಕೊಳ್ಳುವುದು ಅಗತ್ಯವಾಗಿರುತ್ತದೆ. ನಿಗದಿತ ಕನಿಷ್ಠ ಮೊತ್ತವು ಬ್ಯಾಂಕಿನ ವಿವೇಚನೆಯಿಂದ ಕಾಲಕಾಲಕ್ಕೆ ಪರಿಷ್ಕರಣೆಗೆ ಒಳಪಟ್ಟಿದ್ದು, ಗ್ರಾಹಕರಿಗೆ ಒಂದು ತಿಂಗಳ ಮುಂಚಿತವಾಗಿ ಸೂಚನೆ ನೀಡಲಾಗುತ್ತದೆ. ಇದನ್ನು ಶಾಖೆಯ ಸೂಚನ ಫಲಕದಲ್ಲಿ ಮತ್ತು ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗುತ್ತದೆ. ನಿಗದಿತ ಕನಿಷ್ಠ ಮೊತ್ತವನ್ನು ಕಾಯ್ದುಕೊಳ್ಳಲು ಗ್ರಾಹಕರು ವಿಫಲವಾದಾಗಲೆಲ್ಲಾ ದಂಡ ಶುಲ್ಕ ವಿಧಿಸಲಾಗುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ನಿಗದಿತ ಶುಲ್ಕಗಳು ಬ್ಯಾಂಕಿನ ವೆಬ್‌ಸೈಟ್ www.karnatakabank.comನಲ್ಲಿ ಲಭ್ಯವಿದೆ ಅಥವಾ ಶಾಖೆಗಳಿಂದ ಪಡೆಯಬಹುದು.

**ಲೆಡ್ಜರ್ ಫೋಲಿಯೊ ಶುಲ್ಕಗಳು:** ಉಳಿತಾಯ ಬ್ಯಾಂಕ್ ಖಾತೆಗಳಿಗೆ ಲೆಡ್ಜರ್ ಫೋಲಿಯೊ ಶುಲ್ಕವನ್ನು ವಿಧಿಸಲಾಗುವುದಿಲ್ಲ.

### ಎಸ್‌ಎಂಎಸ್ ಎಚ್ಚರಿಕೆಗಳು

ಎಸ್‌ಎಂಎಸ್ ಎಚ್ಚರಿಕೆಗಳ ಸೌಲಭ್ಯ ಲಭ್ಯವಿದೆ ಮತ್ತು ಗ್ರಾಹಕರು ಸೌಲಭ್ಯಕ್ಕಾಗಿ ಉಚಿತವಾಗಿ ನೋಂದಾಯಿಸಿಕೊಳ್ಳಬಹುದು. ಎಸ್‌ಎಂಎಸ್ ಎಚ್ಚರಿಕೆಗಳಿಗಾಗಿ ಪ್ರಸ್ತುತ ನಿಗದಿಯಾಗಿರುವ ಶುಲ್ಕಗಳು ಬ್ಯಾಂಕಿನ ವೆಬ್‌ಸೈಟ್ www.karnatakabank.comನಲ್ಲಿ ಲಭ್ಯವಿದೆ ಅಥವಾ ಶಾಖೆಗಳಿಂದ ಪಡೆಯಬಹುದು.

### ಖಾತೆಯ ವರ್ಗಾವಣೆ ಮತ್ತು ಮುಚ್ಚುವಿಕೆ

ಖಾತೆದಾರನ (ರ) ಕೋರಿಕೆಯ ಮೇರೆಗೆ ಬ್ಯಾಂಕುಗಳ ಶಾಖೆಗಳ ನಡುವೆ ಖಾತೆಗಳನ್ನು ವರ್ಗಾಯಿಸಬಹುದು. ಖಾತೆಯನ್ನು ಮುಚ್ಚುವ ವಿನಂತಿಗೆ ಮುಚ್ಚುವ ಕಾರಣವನ್ನು ತಿಳಿಸಬೇಕು. ಪಾಸ್ ಪುಸ್ತಕ, ಬಳಕೆಯಾಗದ ಚೆಕ್ ಹಾಳೆಗಳು ಅಂತಹ ವಿನಂತಿಯೊಂದಿಗೆ ಇರಬೇಕು. ಎಲ್ಲಾ ಜಂಟಿ ಸಹಿದಾರರ ಕೋರಿಕೆಯ ಮೇರೆಗೆ ಜಂಟಿ ಖಾತೆಗಳನ್ನು ಮುಚ್ಚಬಹುದು. ಖಾತೆಯನ್ನು ಪ್ರಾರಂಭಿಸಿದ ಹನ್ನೆರಡು ತಿಂಗಳ ಒಳಗಾಗಿ ಮುಚ್ಚಿದರೆ ನಿಗದಿತ ದರದಲ್ಲಿ ಸೇವಾ ಶುಲ್ಕವನ್ನು ವಿಧಿಸಲಾಗುತ್ತದೆ. ಇದಕ್ಕಾಗಿ ಪ್ರಸ್ತುತ ಸೂಚಿಸಲಾದ ಶುಲ್ಕಗಳು ಬ್ಯಾಂಕಿನ ವೆಬ್‌ಸೈಟ್ www.karnatakabank.comನಲ್ಲಿ ಲಭ್ಯವಿದೆ. ಈ ಮಾಹಿತಿಯನ್ನು ಶಾಖೆಗಳಿಂದಲೂ ಪಡೆಯಬಹುದು. ಆದಾಗ್ಯೂ, ಮೊದಲ ಠೇವಣಿ ದಿನಾಂಕದಿಂದ 14 ದಿನಗಳ ಅವಧಿಯಲ್ಲಿ ಖಾತೆಯನ್ನು ಮುಚ್ಚಿದರೆ ಶುಲ್ಕ ವಿಧಿಸಲಾಗುವುದಿಲ್ಲ.

ವಿವರವಾದ ನಿಯಮಗಳು ಬ್ಯಾಂಕಿನ ವೆಬ್‌ಸೈಟ್ www.karnatakabank.comನಲ್ಲಿ ಮತ್ತು ವಿನಂತಿಯ ಮೇರೆಗೆ ಎಲ್ಲಾ ಶಾಖೆಗಳಲ್ಲಿ ಲಭ್ಯವಿದೆ.